**International Journal of Research in Social Sciences**
Vol. 7 Issue 1, January 2017,
ISSN: 2249-2496 Impact Factor: 7.081
Journal Homepage: http://www.ijmra.us, Email: editorijmie@gmail.com Double-Blind Peer Reviewed Refereed Open Access International Journal - Included in the International Serial Directories Indexed & Listed at: Ulrich's Periodicals Directory ©, U.S.A., Open J-Gate as well as in Cabell's Directories of Publishing Opportunities, U.S.A

# PRE-EMINENT BADAGUTHITTU YAKSHAGANA ARTIST-GOPALA ACHARYA

**Dr. RAMESH ACHAR**

## ಬಡಗು ತಿಟ್ಟಿನ ಹೆಸರಾಂತ ಕಲಾವಿದ ತೀರ್ಥಹಳ್ಳಿ ಗೋಪಾಲಾಚಾರ್ಯ

**ಡಾ. ರಮೇಶಆಚಾರ್,**
ಸಹ ಪ್ರಾಧ್ಯಾಪಕರು,
ಎಸ್.ಆರ್.ಎಸ್.ಎಂ.ಎನ್ಸ ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಬಾರಕೂರು, ಉಡುಪಿಜಿಲ್ಲೆ. 576210.

ಯಕ್ಷಗಾನ ಕನ್ನಡ ನಾಡಿನ ಹಿರಿಮೆಯ ರಾಜಕಲೆ. ಆಬಾಲವೃದ್ಧರಿಗೂ ಹೃನ್ಮನ ತಣಿಸುವ ಕಲಾತಾಣ. ನೃತ್ಯಪ್ರಧಾನರಂಗ ಕಲೆಯಾದ ಯಕ್ಷಗಾನವು ಸಾಹಿತ್ಯ, ಸಂಗೀತ, ಚಿತ್ರ, ಅಭಿನಯ, ಮಾತುಗಾರಿಕೆ ಮತ್ತು ವೇಷಭೂಷಣಗಳನ್ನು ಒಳಗೊಂಡ ಸಮಷ್ಟಿಕಲೆ. ನಿರಕ್ಷರಕುಕ್ಷಿಗಳನ್ನೂ ತನ್ನೆಡೆಗೆ ಆಕರ್ಷಿಸಬಲ್ಲ ಮಾಂತ್ರಿಕ ಶಕ್ತಿಯಕ್ಷಗಾನಕ್ಕಿದೆ. ಹೆಸರಾಂತ ಕಲಾವಿದ ತೀರ್ಥಹಳ್ಳಿ ಗೋಪಾಲಾಚಾರ್ಯರು ಬಡಗುತಿಟ್ಟಿನರಂಗಸ್ಥಳವನ್ನು ಶ್ರೀಮಂತಗೊಳಿಸಿದವರು. ಕೋಡಂಗಿ ವೇಷದಿಂದ ಹಿಡಿದು ಎರಡನೇ ವೇಷದವರೆಗೆ ಆಚಾರ್ಯರು ನಡೆದು ಬಂದ ಯಶೋಗಾಥೆ ಮುಂದಿನ ಪೀಳಿಗೆಗೆ ಆದರ್ಶಪ್ರಾಯವಾದದ್ದು. ನೆಲ್ಲೂರು ಮರಿಯಪ್ಪ ಆಚಾರ್ಯರಿಂದ ಹಿಡಿದು ಮರವಂತೆ ನರಸಿಂಹದಾಸರು, ಕಾಳಿಂಗನಾವಡರು, ಸುಬ್ರಹ್ಮಣ್ಯಧಾರೇಶ್ವರರಿಂದ ಇಂದಿನ ಭಾಗವತ ರಾಘವೇಂದ್ರ ಆಚಾರ್ಯರವರೆಗೆ ಸುಮಾರು ಮೂರು ತಲೆಮಾರಿನ ಭಾಗವತರ ಪದ್ಯಕ್ಕೆ ಹೆಜ್ಜೆ ಹಾಕಿದ ಕೀರ್ತಿ ಇವರಿಗಿದೆ. ಹಾಗೆಯೇ ಮೂರು ತಲೆಮಾರಿನ ಹಿರಿಯ ಕಿರಿಯ ಕಲಾವಿದರೊಂದಿಗೆ ಮುಮ್ಮೇಳದಲ್ಲಿ ಹೆಜ್ಜೆ ಹಾಕಿದ ಶ್ರೇಯಸ್ಸೂ ಇವರದ್ದು. ಸೌಮ್ಯ ಸ್ವಭಾವದ ಮಿತಭಾಷಿ, ಸ್ವಾಭಿಮಾನಿ. ಅಭಿಜಾತ ಕಲಾವಿದರಾಗಿ ಸುಮಾರು ನಾಲ್ಕು ದಶಕಕ್ಕೂ ಮಿಕ್ಕಿ ಅಭಿಮನ್ಯು, ಬಭ್ರುವಾಹನದಂತಹ ಪುಂಡುವೇಷಗಳಲ್ಲಿ ಮೆರೆದು ಕ್ರಾಂತಿ ಮೂಡಿಸಿದವರು. ಯಕ್ಷರಂಗದ ಚಿರಯುವಕ, ರಂಗಸ್ಥಳದ ಪಾದರಸ ಎಂದೆಲ್ಲ ಖ್ಯಾತಿವೆತ್ತ ತೀರ್ಥಹಳ್ಳಿ ಗೋಪಾಲರ ಕಲಾಬದುಕಿನ ನೋಟವೇ ಪ್ರಸ್ತುತ ಲೇಖನ.

ಗೋಪಾಲಾಚಾರ್ಯರು ಹುಟ್ಟಿದ್ದು ಕರ್ನಾಟಕದ ನಿಸರ್ಗ ರಮಣೀಯ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯಲ್ಲಿ. ಪಿ.ವಾಸುದೇವ ಆಚಾರ್ಯ ಮತ್ತು ಸುಲೋಚನ ದಂಪತಿಯ ಐದು ಮಂದಿಮಕ್ಕಳಲ್ಲಿ ಎರಡನೆಯ ಮಗನಾಗಿ ಗೋಪಾಲರು ಫೆಬ್ರುವರಿ 24, 1956ರಂದು ಜನಿಸಿದರು. ಅತೀವ ಬಡತನವೇ ಕಾರಣವಾಗಿ ಮೂರನೆಯ ತರಗತಿಗೇ ಓದನ್ನು ನಿಲ್ಲಿಸಬೇಕಾಯಿತೆಂದ ಗೋಪಾಲರಿಗೆ ಯಕ್ಷಗಾನದತ್ತ ಒಲವು, ಆಸಕ್ತಿ ಹೇಗಾಯ್ತು? ಎಂದು ಪ್ರಶ್ನಿಸಿದರೆ, "ಏನೋ ರಕ್ತಗುಣ ಅಂತಾರಲ್ಲ! ಯಕ್ಷಗಾನ ಕಲೆ ನನಗೆ ತಂದೆಯಿಂದ ಬಂದ ಬಳುವಳಿ. ತಂದೆ ಪೆರ್ಡೂರಿನವರಾದ್ದರಿಂದ ದೇವಸ್ಥಾನದ ಸೇವೆಯಾಟಗಳಲ್ಲಿ ಪಾಲ್ಗೊಳ್ಳುವಿಕೆ ಹಾಗೂ ಮೇಳದ ಒಡನಾಟವೂ ಅವರಿಗಿದ್ದಿತ್ತು. ಹವ್ಯಾಸಿ ಹಿಮ್ಮೇಳದ ಕಲಾವಿದರಾಗಿ ಸೊಗಸಾದ ಕಂಠಸಿರಿಯಲ್ಲಿ ಪದ ಹೇಳುವ, ಮದ್ದಳೆ ನುಡಿಸುವ, ಚೆಂಡೆಬಾರಿಸುವ ಹವ್ಯಾಸವಿತ್ತು. ಪ್ರಸಂಗದ ನಡೆಯೂ ಚೆನ್ನಾಗಿ ತಿಳಿದಿತ್ತು. ಹಳ್ಳಿಗಳಲ್ಲಿ ನಡೆಯುವ ತಾಳಮದ್ದಳೆಗಳಲ್ಲಿ ಭಾಗವತಿಕೆ ಮಾಡುತ್ತಿದ್ದು ನನ್ನನ್ನೂ ಪಾಲ್ಗೊಳ್ಳುವಂತೆ ಮಾಡುತ್ತಿದ್ದರು. ಆಗಾಗ ಯಕ್ಷಗಾನ ಬಯಲಾಟಗಳಿಗೂ ಕರೆದುಕೊಂಡು ಹೋಗುತ್ತಿದ್ದುದರಿಂದ ನನಗೆ ಯಕ್ಷಗಾನ ನೋಡುವುದರಲ್ಲಿ ಆಸಕ್ತಿ ಹೆಚ್ಚಾಯಿತು. ಅಲ್ಲದೆ ನವರಾತ್ರಿಯ ಸಮಯದಲ್ಲಿ ಬರುತ್ತಿದ್ದ ಚಿಕ್ಕಮೇಳದ ಪ್ರದರ್ಶನಗಳನ್ನು ನೋಡುತ್ತ ಮೈಮರೆಯುತ್ತಿದ್ದ ನನಗೆ ಯಕ್ಷಗಾನದ ವೇಷದ ಮೇಲೆ ಆಸಕ್ತಿ ಮೂಡಿತು. ಬಣ್ಣದ ಬದುಕಿನಲ್ಲಿ ತಾನೂ ಪಾಲ್ಗೊಂಡು ಗೆಜ್ಜೆಕಟ್ಟಿ ಕುಣಿಯಬೇಕೆಂಬ ಬಯಕೆಯುಂಟಾಯಿತು. ಹೆತ್ತವರ ಪ್ರೋತ್ಸಾಹವೂ ಸಿಕ್ಕಿದ್ದರಿಂದ ಯಕ್ಷಗಾನ ಕ್ಷೇತ್ರಕ್ಕೆ ಹೆಜ್ಜೆಯಿಟ್ಟೆ. ಯಕ್ಷಗಾನದ ಹಿನ್ನೆಲೆಯ ಮನೆತನನಮ್ಮದಾಗಿದ್ದರೂ ಯಕ್ಷಗಾನವನ್ನು ವೃತ್ತಿ ಜೀವನದಲ್ಲಿ ಅಳವಡಿಸಿಕೊಂಡು ಮುನ್ನಡೆದದ್ದು ನಾನೊಬ್ಬನೇ, ನನಗಿದೇ ಬದುಕು." ಎನ್ನುತ್ತಾರೆ.

**International Journal of Research in Social Sciences**
Vol. 7Issue 1, January 2017,
ISSN: 2249-2496 Impact Factor: 7.081
Journal Homepage: http://www.ijmra.us, Email: editorijmie@gmail.com Double-Blind Peer Reviewed Refereed Open Access International Journal - Included in the International Serial Directories Indexed & Listed at: Ulrich's Periodicals Directory ©, U.S.A., Open J-Gate as well as in Cabell's Directories of Publishing Opportunities, U.S.A

ಯಕ್ಷಗಾನ ಕಲಾವಿದನೊಬ್ಬ ಹಂತಹಂತವಾಗಿ ಮೇಲೇರಿದಾಗಲೇ ಪರಿಪೂರ್ಣ ವೇಷಧಾರಿಯಾಗಲು ಸಾಧ್ಯ. ಕೋಡಂಗಿ ಪಾತ್ರ ನಿರ್ವಹಣೆಯೇ ಆತನ ರಂಗನಿಚ್ಚಣಿಕೆಯ ಮೊದಲ ಸೋಪಾನ. ಕೋಡಂಗಿ ಕುಣಿತದಿಂದಲೇ ಕಲಾವಿದನಿಗೆ ಯಕ್ಷಗಾನದ 'ಅಆಇಈ' ಗೊತ್ತಾಗುವುದು. ಗೋಪಾಲರು ಮೊದಲು ಮಾಡಿದ್ದು ಕೋಡಂಗಿ ವೇಷವನ್ನು. ಆಮೇಲೆ ನಿತ್ಯವೇಷ ಅಥವಾ ಕಟ್ಟುವೇಷ ಎಂದು ಕರೆಸಿಕೊಳ್ಳುವ ಬಾಲಗೋಪಾಲನ ಪಾತ್ರ, ನಂತರ ಪೀಠಿಕಾ ಸ್ತ್ರೀವೇಷ ಮಾಡಿದರು. ಸ್ತ್ರೀಪಾತ್ರ ನಿರ್ವಹಣೆಯಿಂದ ಲಾಲಿತ್ಯಪೂರ್ಣನೃತ್ಯ ಹಾಗೂ ಅಭಿನಯಶೀಲತೆ ಸ್ಫುಟಗೊಂಡಿತು. ಕ್ರಮೇಣ ನೃತ್ಯಬಲಗೊಳ್ಳುತ್ತಾ ಅವರಲ್ಲಿ ಪ್ರಸಂಗ ಪಾತ್ರ ನಿರ್ವಹಣೆಗೆ ಸಾಕಷ್ಟು ಪುಷ್ಟಿ ದೊರಕಿತು. ಒಡ್ಡೋಲಗ ವೈಭವದಲ್ಲಿ ಪಾತ್ರ ಮಾಡುವ ಮೂಲ ಕಲಯಾನು ಗುಣವಾದ ನೃತ್ಯದ ಪರಿಚಯವಾಯಿತು. ಆಮೇಲೆ ಪುಂಡುವೇಷಗಳಲ್ಲೂ ಪಳಗಲು ತೊಡಗಿದರು. ತದನಂತರ ಪುರುಷವೇಷಗಳನ್ನು, ಪ್ರಧಾನವೇಷಗಳನ್ನು ನಿರ್ವಹಿಸಿ, ಎರಡನೇ ವೇಷ ಅಥವಾ ನಾಯಕ ಪಾತ್ರದಲ್ಲಿ ವಿಜೃಂಭಿಸಿದರು.

ಆಚಾರ್ಯರು ಎಂದೂ ಒಂದೇ ಬಗೆಯ ವೇಷಕ್ಕೆ ಮನಸ್ಸು ಮಾಡಿದವರಲ್ಲ; ಇದೇ ಬೇಕು ಎಂದು ಪಟ್ಟು ಹಿಡಿದವರೂ ಅಲ್ಲ. ಪಾಲಿಗೆ ಬಂದದ್ದು ಪಂಚಾಮೃತವೆಂದು ಸ್ವೀಕರಿಸಿ ಆಪಾತ್ರಕ್ಕೆ ಜೀವತುಂಬಲು ತನ್ನ ಪ್ರಾಮಾಣಿಕ ಪ್ರಯತ್ನ ಮಾಡಿದವರು. ಪಾತ್ರ ಪ್ರಬುದ್ಧರಾದ ಮೇಲೆ ಎದುರು ವೇಷಗಳನ್ನುಎಂದೂ ಕಡೆಗಣಿಸಿದವರಲ್ಲ. "ವೃತ್ತಿಮೇಳಗಳಲ್ಲೂ ಅನೌಚಿತ್ಯಕ್ಕೆ ಎಡೆಯಾದುದುಂಟು. ಕೆಲವೊಮ್ಮೆ ಹವ್ಯಾಸಿ ಕಲಾವಿದರೆದುರು ವೇಷ ಮಾಡಬೇಕಾಗಿ ಬಂದಾಗಲೂ ಔಚಿತ್ಯ ಮೀರುವ ಸಂಭವ ಎದುರಾದದ್ದುಂಟು. ಅಂಥದ್ದರಲ್ಲಿ ಪ್ರಸಂಗದ ನಡೆಗೆ ಧಕ್ಕೆ ಬಾರದಂತೆ ಎದುರು ಪಾತ್ರವನ್ನು ನಡೆಸಿಕೊಂಡು ಹೋಗುವುದು ಕಲಾವಿದನ ಕರ್ತವ್ಯ. ರಂಗದಲ್ಲಿ ಅವಮಾನಮಾಡುವುದು ಸರ್ವಥಾಸಲ್ಲದು" ಎನ್ನುತ್ತಾರೆ. ಗೋಪಾಲಾಚಾರ್ಯರು ಯಕ್ಷಮಾತೆಯ ಕರೆಗೆ ಓಗೊಟ್ಟು ಯಕ್ಷಯಾತ್ರೆ ಪ್ರಾಂಭಿಸಿದ್ದು 1970ರಲ್ಲಿ. ವೃತ್ತಿ ಜೀವನದ ರಂಗಯಾತ್ರೆಯಲ್ಲಿ ಅವರು ಕಲಾಸೇವೆಗೈದ ಮೇಳಗಳಿವು;

**ಮೊದಲುಕಟ್ಟಿದಗೆಜ್ಜೆ–ಇಟ್ಟಹೆಜ್ಜೆ–ದಿಟ್ಟಹೆಜ್ಜೆ:ಶ್ರೀರಂಜದಕಟ್ಟೆ** (ಶಿವರಾಜಪುರ) ಮೇಳ (1970ರಿಂದ 71): ತಂದೆಯ ಸ್ನೇಹಿತರಾಗಿದ್ದ ಕೃಷ್ಣೋಜಿರಾವ್ಯಕ್ಷಗಾನ ಮತ್ತು ತಾಳಮದ್ದಳೆಯಲ್ಲಿ ಸಾಕಷ್ಟುಪಳಗಿದವರು. ಕೃಷ್ಣೋಜಿರಾವ್ಗುರುಗಳಾಗಿ ಅವರಿಂದ ಗೋಪಾಲರ ಹೆಜ್ಜೆ ಕಲಿಕೆ ಹಾಗೂ ನೃತ್ಯಾಭ್ಯಾಸ ಪ್ರಾರಂಭವಾಯಿತು. ಕಲಿಕಾ ಸಂದರ್ಭದಲ್ಲಿ ಗುರುಗಳು ಒಂದೆರಡು ಕಡೆ ಇವರಿಂದ ವೇಷ ಮಾಡಿಸಿರುವುದೂ ಉಂಟು. ಬಾಲಕನ ದಿಟ್ಟ ನಡೆ ಹಾಗೂ ಚುರುಕುತನವನ್ನು ಕಂಡ ಗುರುಗಳು ತಮ್ಮ ಮೇಳವಾದ ರಂಜದಕಟ್ಟೆಗೆ ಸೇರಿಸಿದರು. ರಂಜದಕಟ್ಟೆ ಮೇಳದ ಆಗಿನ ಸ್ಥಿತಿಯನ್ನು ಕುರಿತು ಗೋಪಾಲರು ತಮ್ಮ ನೆನಪಿನ ಸುರುಳಿ ಬಿಚ್ಚಿಡುತ್ತಾರೆ. "1970ರಲ್ಲಿ ನನ್ನ ಹದಿನಾಲ್ಕನೆಯ ವಯಸ್ಸಿನಲ್ಲಿ ಮಲೆನಾಡಿನ ರಂಜದಕಟ್ಟೆ ಮೇಳದಲ್ಲಿ ಮೊದಲು ಗೆಜ್ಜೆ ಕಟ್ಟಿದೆ. ಚಿನ್ನಯ್ಯ ಆಚಾರ್ಯರು ಮೇಳದ ಯಜಮಾನರಾಗಿದ್ದರು. ಆಗ ಮೇಳದ ಸೇವೆ ಗ್ಯಾಸ್‌ಲೈಟ್‌ನ ಬೆಳಕಿನಲ್ಲಿ ನಡೆಯುತ್ತಿತ್ತು. ಧ್ವನಿವರ್ಧಕದ ವ್ಯವಸ್ಥೆ ಇರಲಿಲ್ಲ. ರಂಗಸ್ಥಳವೆಂದರೆ ನಾಲ್ಕುಕಂಬಗಳು, ಮಾವಿನೆಲೆಗಳನ್ನು ಕಂಬಕ್ಕೆ ಸುತ್ತುತ್ತಿದ್ದು, ಮೇಲ್ಭಾಗದಲ್ಲಿ ಸುತ್ತ ತೋರಣ ಕಟ್ಟುತ್ತಿದ್ದರು. ಕೆಲವೊಮ್ಮೆ ಊರವರು ಮೇಳದೊಂದಿಗೆ ಸೇರಿ ಸ್ವಲ್ಪಮಟ್ಟಿಗೆ ಇನ್ನಿತರ ಅಲಂಕಾರ ಮಾಡುತ್ತಿದ್ದರಷ್ಟೆ. ಭಾಗವತರು, ಮದ್ದಳೆಗಾರರು, ಶ್ರುತಿಯವರಿಗೆ ಕೂರಲು ಒಂದು ಹೊಡಿಮಂಚ ಇರುತ್ತಿತ್ತು. ಎದುರಿಗೆ ಪ್ರೇಕ್ಷಕರು ನೂರಾರು ಮಂದಿ ಸೇರುತ್ತಿದ್ದರು. ಕಲಾವಿದರೆಲ್ಲ ಆಟ ನಡೆಯುವಲ್ಲಿಗೆ ಕಾಲ್ನಡಿಗೆಯಲ್ಲಿ ಯೇಸಾಗಬೇಕಾಗಿತ್ತು. ಮೇಳದ ಸಾಮಗ್ರಿಗಳನ್ನು ಎತ್ತಿನಗಾಡಿಯಲ್ಲಿ ಸಾಗಿಸುತ್ತಿದ್ದರು. ಚಿಕ್ಕವನಾಗಿದ್ದರಿಂದ ನನ್ನನ್ನು ಗಾಡಿಯ ಮೇಲೆ ಕೂರಿಸಿಕೊಂಡು ಹೋಗುತ್ತಿದ್ದರು. ನನಗೆ ಬಾಲಗೋಪಾಲವೇಷ, ಪೀಠಿಕಾಸ್ತ್ರೀವೇಷ, ಒಡ್ಡೋಲಗದಲ್ಲಿ ಪಾತ್ರ ಮಾಡಲು ಅವಕಾಶ ಸಿಗುತ್ತಿತ್ತು. ಬಾಲಗೋಪಾಲನ ವೇಷ ಮಾಡುತ್ತಿದ್ದಾಗಲೇ ಕುಣಿತದ ನೈಪುಣ್ಯ, ಮತ್ತು ಚುರುಕುತನವನ್ನು ಗಮನಿಸಿದ ಹಿರಿಯರು ನನಗೆ ಬೇರೆಬೇರೆ ಪಾತ್ರಗಳನ್ನೂ ನೀಡುತ್ತಿದ್ದರು. ರಂಜದಕಟ್ಟೆಮೇಳದಲ್ಲಿ ಮೊದಲು ಗೆಜ್ಜೆಕಟ್ಟಿದ್ದು 'ರತಿಕಲ್ಯಾಣ' ಪ್ರಸಂಗದಲ್ಲಿ. ಮೊದಲು ಕೋಡಂಗಿ ವೇಷದಿಂದ ರಂಗಪ್ರವೇಶ ಮಾಡಿದ ನಾನು ನಂತರ ರತಿದೇವಿಯ ಪಾತ್ರವನ್ನು

ಮಾಡಬೇಕಾಯಿತು. ಚೌಕಿಯಲ್ಲಿ ಪದ–ಅರ್ಥಗಳನ್ನೆಲ್ಲಾ ಕೇಳಿ ತಿಳಿದುಕೊಂಡೆ. ಆದರೂ ಬಹಳ ಹೆದರಿಕೊಂಡಿದ್ದ ನನಗೆ ಸಹಕಲಾವಿದರೆಲ್ಲರೂ ಸ್ಫೂರ್ತಿ ತುಂಬಿದರು. ಬಾಲಮನಸ್ಸಿಗೆ ಎಷ್ಟುದಕ್ಕಿತೋ ಅಷ್ಟನ್ನು ಗ್ರಹಿಸಿಕೊಂಡು ರಂಗಸ್ಥಳಕ್ಕೆ ಬಂದೆ. ಪಾತ್ರನಿರ್ವಹಿಸುವಾಗ ಮತ್ತೆ ಹೆದರಿಕೆಯೇ ಆಗುತ್ತಿತ್ತು."

**ನಾಗರಕೊಡಿಗೆಮೇಳದಲ್ಲಿ:** (1971ರಿಂದ73) ರಂಜದಕಟ್ಟೆ ಮೇಳದಲ್ಲಿ ಬಾಲರಾಜಹಂಸ, ಬಾಲಪರಶುರಾಮ ಮತ್ತು ಬಭ್ರುವಾಹನದಂತಹ ಸಣ್ಣಪುಟ್ಟ ಪಾತ್ರನಿರ್ವಹಿಸುತ್ತಿದ್ದ ಗೋಪಾಲರಿಗೆ ನಾಗರಕೊಡಿಗೆ ಮೇಳದಲ್ಲಿ ನಗರಜಗನ್ನಾಥಶೆಟ್ಟಿಯವರ ಪರಿಚಯವಾಯ್ತು. ಅವರೊಡನೆ ವೇಷ ಮಾಡಲು ಅಪರೂಪಕ್ಕೆ ಅವಕಾಶ ಸಿಗುತ್ತಿತ್ತು. ಜಗನ್ನಾಥರವೇಷ, ಕುಣಿತ, ಮಾತುಗಾರಿಕೆಯನ್ನು ನೋಡಲು, ಕೇಳಲು ಅವಕಾಶ ಸಿಕ್ಕಂತಾಯಿತು. ಕ್ರಮೇಣ ಅಂತಹ ಪ್ರಬುದ್ಧ ಕಲಾವಿದರಿಂದ ಏನೆಲ್ಲಾ ತಿಳಿದುಕೊಳ್ಳಬೇಕೋ ಅದನ್ನೆಲ್ಲ ತಿಳಿದುಕೊಳ್ಳುತ್ತಾ ಬಂದರು.

**ಗೋಳಿಗರಡಿಮೇಳ:** (1973ರಿಂದ77): ಶ್ರೀಪಂಜುರ್ಲಿಕೃಪಾಪೋಷಿತಗೋಳಿ ಗರಡಿಮೇಳದಲ್ಲಿ ನಗರಜಗನ್ನಾಥಶೆಟ್ಟಿ, ಐರೋಡಿ ಗೋವಿಂದಪ್ಪ, ಬೇಗಾರು ಪದ್ಮನಾಭ, ಜಲವಳ್ಳಿ ಮೊದಲಾದ ಘಟಾನುಘಟಿ ಕಲಾವಿದರಿದ್ದರು. ತುಳುನಾಡಿನಕೋಟಿ–ಚೆನ್ನಯರಕಥೆಯನ್ನು ಪ್ರತಿಯೊಬ್ಬರಿಗೂ ಮುಟ್ಟಿಸುವಲ್ಲಿ ಈ ಮೇಳದ ಕೊಡುಗೆ ಅನನ್ಯ. ಗೋಳಿಗರಡಿಮೇಳಕ್ಕೆ ಬಂದ ಮೇಲೆ ಗೋಪಾಲರಿಗೆ ಒಳ್ಳೆಯ ಪಾತ್ರಗಳನ್ನು ಮಾಡಲು ಅವಕಾಶಸಿಕ್ಕಿತು. ಅಲ್ಲಿಂದ ರಂಗದನಡೆಯಲ್ಲಿ ತಿಳುವಳಿಕೆ ಮೂಡಿಸಿಕೊಳ್ಳುತ್ತಾ ಬಂದ ಅವರು ಕೋಟಿಚೆನ್ನಯ್ಯನ ಪ್ರಸಂಗದಪಾತ್ರ, ಪರಶುರಾಮ, ಬಭ್ರುವಾಹನ, ಪಟಸಂಧಿಯಲವ–ಕುಶಪಾತ್ರ ಮುಂತಾದವುಗಳನ್ನು ನಿರ್ವಹಿಸುತ್ತಿದ್ದರು.

**ಶ್ರೀಗುರುಪ್ರಸಾದಿತ ಯಕ್ಷಗಾನಮಂಡಳಿ ಸಾಲಿಗ್ರಾಮ:** (1977ರಿಂದ1987) ಸಾಲಿಗ್ರಾಮ ಮೇಳಕ್ಕೆ ಸೇರಿದ್ದು ಗೋಪಾಲರ ಯಕ್ಷಕಲಾ ಬದುಕಿಗೆ ವಸಂತಾ ಗಮನದಂತಾಯ್ತು. ಯಕ್ಷಗಾನದಲ್ಲಿ ತಾನು ಹೆಚ್ಚುಹೆಚ್ಚು ಕಲಿತು ಮೇಲೇರಬೇಕೆಂಬ ಉತ್ಕಟ ಹಂಬಲವುಳ್ಳ ಅವರಿಗೆ ವೃತ್ತಿಬದುಕಿನಲ್ಲಿ ಹೊಸತಿರುವುಸಿಕ್ಕಿತು. ಆ ದಿನಗಳನ್ನು ಸ್ಮರಿಸಿಕೊಳ್ಳುತ್ತಾ, "ಆಗ ಸಾಲಿಗ್ರಾಮಮೇಳದಲ್ಲಿ ಮರವಂತೆ ನರಸಿಂಹದಾಸ, ನೆಲ್ಲೂರು ಮರಿಯಪ್ಪಆಚಾರ್ಯ, ಹುಂಚದಕಟ್ಟೆ ಶ್ರೀನಿವಾಸ ಆಚಾರ್ಯ, ವೇಷಧಾರಿಗಳಾಗಿ ಶಿರಿಯಾರಮಂಜುನಾಯ್ಕ, ಜಲವಳ್ಳಿವೆಂಕಟೇಶ, ಅರಾಟೆಮಂಜುನಾಥ ಮೊದಲಾದ ಕೀರ್ತಿವಂತ ಕಲಾವಿದರಿದ್ದಿದ್ದರು." ಎನ್ನುತ್ತಾರೆ. ಗೋಪಾಲರು ಮೊದಮೊದಲು ಪೀಠಿಕಾಸ್ತ್ರೀ ವೇಷವನ್ನು ಮತ್ತಿತರ ಪುರುಷವೇಷಗಳನ್ನೂ ಮಾಡುತ್ತಿದ್ದರು. ಮರು ವರ್ಷವೇಗುಂಡ್ಮಿ ಕಾಳಿಂಗನಾವಡರು ಸಾಲಿಗ್ರಾಮಮೇಳಕ್ಕೆ ಸೇರ್ಪಡೆಗೊಂಡರು. ಹೊಸಪ್ರಸಂಗಗಳು ಮೆರೆಯುತ್ತಿದ್ದ ಆಕಾಲದಲ್ಲಿ ನಾವಡರೇಗೋಪಾಲರಿಗೆ ಮೊದಲು ಪುಂಡುವೇಷಕ್ಕೆ ಅವಕಾಶ ಮಾಡಿಕೊಟ್ಟರು. ನಂತರ ತಾವು ಬರೆದ 'ನಾಗಶ್ರೀ' ಪ್ರಸಂಗದಲ್ಲಿ ಶೈಥಿಲ್ಯನ ಪಾತ್ರ ನೀಡಿದರು. ಆಪಾತ್ರ ಗೋಪಾಲರಿಗೆ ಬಹಳ ಯಶಸ್ಸನ್ನು ತಂದುಕೊಟ್ಟಿತು. ಗೋಪಾಲರ ಪ್ರತಿಭೆಯನ್ನು ಕಂಡ ನಾವಡರು ಮುಂದೆ 'ರಾಜಾನಂದನ'ನ ಪಾತ್ರ, 'ಕಲಿಕ್ರೋಧನ'ನ ಪಾತ್ರ ಹೀಗೆ ಅನೇಕ ಪ್ರಮುಖ ಪುಂಡು ಪಾತ್ರಗಳನ್ನು ನಿರ್ವಹಿಸಲು ಅವಕಾಶ ನೀಡಿದರು. ಹಳೆಯ ಪ್ರಸಂಗಗಳಲ್ಲಿ ಅಭಿಮನ್ಯುವಿನ ಪಾತ್ರಕ್ಕೆ ಅವಕಾಶ ಸಿಕ್ಕಿತು. ಗೋಪಾಲರ ಅಭಿಮನ್ಯು ಪಾತ್ರ ಪ್ರಸಿದ್ಧಗೊಂಡು ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಯ್ತು. ಹೆಚ್ಚೇಕೆ, ಪ್ರಾರಂಭದಲ್ಲಿ ಯಾವುದೇ ಪ್ರಸಂಗವಿದ್ದರೂ ಕೊನೆಯಲ್ಲಿ ಅಭಿಮನ್ಯು ಪ್ರಸಂಗ ಇಟ್ಟೇ ಇಡುತ್ತಿದ್ದರಂತೆ. ನಾಗರಕೊಡಿಗೆ ಮೇಳದಲ್ಲಿದ್ದ ನಗರ ಜಗನ್ನಾಥಶೆಟ್ಟಿಯವರು ಸಾಲಿಗ್ರಾಮ ಮೇಳದಲ್ಲಿ ಸಹಕಲಾವಿದರಾಗಿ ಮೆರೆಯುತ್ತಿದ್ದುದರಿಂದ ಗೋಪಾಲರಿಗೆ ಕಲಿಯಲು ಇನ್ನಷ್ಟು ಸದವಕಾಶ ಲಭ್ಯವಾಯಿತು.

ಯಕ್ಷಗಾನವಿಮರ್ಶಕ. ಎಸ್.ವಿ.ಉದಯಕುಮಾರ್ಶೆಟ್ಟಿಯವರು ಆಚಾರ್ಯರ ಕುರಿತು ಬರೆಯುತ್ತಾ, "....ಹೊಸಪ್ರಸಂಗಗಳಲ್ಲಿ ದಾಖಲೆಯೆಂಬಂತೆ ಈವರೆಗೆ ಸಹಸ್ರಾರು ಪ್ರಯೋಗ ಕಂಡ ನಾಗಶ್ರೀಪ್ರಸಂಗದ ಶೈಥಿಲ್ಯನಾಗಿ ಆಚಾರ್ಯರು ಬಹುಬೇಗ ಗುರುತಿಸಿಕೊಂಡರು. ನಂತರ ನಾಗಶ್ರೀ, ಚೆಲುವೆ ಚಿತ್ರಾವತಿ, ಶ್ರೀದೇವಿಬನಶಂಕರಿ, ರತಿರೇಖಾ ಮುಂತಾದ ಪ್ರಸಂಗಗಳಲ್ಲಿ ಮೂರನೇ ವೇಷಧಾರಿಯಾಗಿ ಮಿಂಚಿದ ಇವರು ಪೌರಾಣಿಕ ಪ್ರಸಂಗಗಳಲ್ಲಿ ಅಭಿಮನ್ಯು, ಬಭ್ರುವಾಹನ, ಕುಶಲವ,

**International Journal of Research in Social Sciences**
Vol. 7Issue 1, January 2017,
ISSN: 2249-2496 Impact Factor: 7.081
Journal Homepage: http://www.ijmra.us, Email: editorijmie@gmail.com Double-Blind Peer Reviewed Refereed Open Access International Journal - Included in the International Serial Directories Indexed & Listed at: Ulrich's Periodicals Directory ©, U.S.A., Open J-Gate as well as in Cabell's Directories of Publishing Opportunities, U.S.A

ಧರ್ಮಾಂಗದ, ರುಕ್ಮಾಂಗ, ಶುಭಾಂಗ, ಚಿತ್ರಕೇತ ಮುಂತಾದ ಪುಂಡುವೇಷದಿಂದ ಬಹು ಬೇಗಜನಮನಗೆದ್ದರು." ಎಂದಿದ್ದಾರೆ.

**ಶಿರಸಿಮೇಳ:** (1987ರಿಂದ89) ಸಾಲಿಗ್ರಾಮ ಮೇಳವನ್ನು ಬಿಟ್ಟು ಶಿರಸಿಮೇಳಕ್ಕೆ ಸೇರಿ ಎರಡು ವರ್ಷ ಕಲಾಸೇವೆ ಮುಂದುವರಿಸಿದ ಆಚಾರ್ಯರು, ಚಿಟ್ಟಾಣಿ ರಾಮಚಂದ್ರಹೆಗಡೆ, ಗೋಡೆನಾರಾಯಣಹೆಗಡೆ, ಕೆ.ಪಿಹೆಗಡೆ, ಸದಾಶಿವಅಮೀನ್, ರಾಕೇಶ್‌ಮಲ್ಯರಂತಹ (ಚೆಂಡೆ) ದಿಗ್ಗಜರಗರಡಿಯಲ್ಲಿ ಪಳಗಿದರು. ಇಲ್ಲಿಯ ಕಲಾವಿದರ ಒಡನಾಟದಿಂದ ಬಡಾಬಡಗಿನ ನಾಟ್ಯಶೈಲಿಯನ್ನು ಮೈಗೂಡಿಸಿಕೊಂಡ ಆಚಾರ್ಯರು ಎರಡೂ ಶೈಲಿಗಳ ಪ್ರಾತಿನಿಧಿಕಕಲಾವಿದರಾಗಿ ಮೂಡಿಬಂದರು.

**ಶ್ರೀಅನಂತಪದ್ಮನಾಭ ಯಕ್ಷಗಾನ ಮಂಡಳಿಪೆರ್ಡೂರು:** (1989ರಿಂದ 2016) ಶಿರಸಿ ಮೇಳದಿಂದ ಪೆರ್ಡೂರು ಮೇಳಕ್ಕೆ ಸೇರ್ಪಡೆಗೊಂಡ ಗೋಪಾಲರು ತಮ್ಮ ವೃತ್ತಿ ಬದುಕಿನ ನಿವೃತ್ತಿಯವರೆಗೂ 27ವರ್ಷ ತಿರುಗಾಟದಲ್ಲಿ ಕಲಾಸೇವೆ ಮಾಡಿದರು. ಮೇಳದ ಬಗೆಗೆ ಮಾತನಾಡುತ್ತಾ, "ಪೆರ್ಡೂರು ಮೇಳ ನನಗೊಂದು ರೀತಿಯಲ್ಲಿ ಹಕ್ಕೆಯಾಗಿಬಿಟ್ಟಿತ್ತು. ಇತರ ಮೇಳದವರ ಕರೆಬಂದಿದ್ದರೂ, ಕೆಲವು ಆಮಿಷಗಳನ್ನೊಡ್ಡಿದ್ದರೂ ಅದೇಕೋ ಬೇರೆಡೆಗೆ ಹೋಗುವ ಮನಸ್ಸಾಗಲೇ ಇಲ್ಲ." ಎನ್ನುತ್ತಾರೆ. ಕಾರಣ ಕೇಳಿದರೆ "ಯಕ್ಷಗಾನವೆಂಬುದು ಹಿಮ್ಮೇಳ–ಮುಮ್ಮೇಳಕಲಾವಿದರಿಂದಾಗಿ ಅದು ಮೇಳಕಲೆ. ಒಂದು ಮೇಳದಲ್ಲಿ ಕಲಾವಿದನಿಗೆ ಕೂಟ ಚೆನ್ನಾಗಿರಬೇಕು. ಪೆರ್ಡೂರಿನ ಹಿಮ್ಮೇಳ, ಮುಮ್ಮೇಳದ ಕೂಟ ನನಗೆ ಚೆನ್ನಾಗಿ ಕೂಡಿಬಂತು. ಮೇಳದ ವ್ಯವಸ್ಥಾಪಕರ ಯಜಮಾನಿಕೆಯೂ ಚೆನ್ನಾಗಿತ್ತು. ಸುದೀರ್ಘ ಅವಧಿಯಲ್ಲಿ ಮೇಳದಿಂದ ಯಾವುದೇ ಬಾಧೆನನ್ನನ್ನು ತಟ್ಟಲಿಲ್ಲ. ಮೇಳದಲ್ಲಿ ಹಿತವಿದ್ದುದರಿಂದ ಅಲ್ಲಿಯೇ ಉಳಿದುಕೊಂಡೆ." ಎನ್ನುತ್ತಾರೆ.

ಪೆರ್ಡೂರು ಮೇಳದ ಖ್ಯಾತಿವೆತ್ತ ಪ್ರಸಂಗಗಳಾದ ಪದ್ಮಪಲ್ಲವಿ, ಚಾರುಚಂದ್ರಿಕೆ, ಮಾನಸಮಂದಾರ, ಪುಷ್ಪಾಂಜಲಿ, ಶಿವರಂಜಿನಿ, ದಾಮಿನಿ–ಭಾಮಿನಿ, ನಾಗವಲ್ಲಿ ಪ್ರಸಂಗಗಳ ಯಶಸ್ಸಿನಲ್ಲಿ ಆಚಾರ್ಯರ ಕೊಡುಗೆ ಅಪಾರ. ರಾಮನಾಯರಿ ಮತ್ತು ಆಚಾರ್ಯರ ಜೋಡಿವೇಷ, ಪ್ರಣಯ ಹಾಗೂ ಶೃಂಗಾರ ದೃಶ್ಯಗಳು, ದೀಪ ನೃತ್ಯ ಇತ್ಯಾದಿ ನವನವೀನ ಸನ್ನಿವೇಶಗಳು ಅಪಾರಜನ ಮನ್ನಣೆಪಡೆದವು. ಪೌರಾಣಿಕ ಪ್ರಸಂಗಗಳಲ್ಲಿ ನಾಯರಿಯವರ ಚಿತ್ರಾಂಗದೆಗೆ ಬಭ್ರುವಾಹನ, ಸುಭದ್ರೆಗೆ ಅಭಿಮನ್ಯು, ಪ್ರಭಾವತಿಗೆ ಸುಧನ್ವ ಮುಂತಾದವೇಷಗಳೂ ಅಷ್ಟೇ ಜನಮನ್ನಣೆಗಳಿಸಿದವು. "ಅಭಿಮನ್ಯುಪಾತ್ರಕ್ಕೆ ಆಚಾರ್ಯರಿಗೆ ಆಚಾರ್ಯರೇ ಸಾಟಿ. ಆಚಾರ್ಯರು ಅಂದರೆ ಅಭಿಮನ್ಯು, ಅಭಿಮನ್ಯು ಅಂದರೆ ಆಚಾರ್ಯರು ಅನ್ನುವಷ್ಟು ಅವರಿಗೆ ಖ್ಯಾತಿ ಬರಲು ಬಹುಕಾಲ ಬೇಕಾಗಲಿಲ್ಲ. ಆಚಾರ್ಯರಿಗೆ ಕೀರ್ತಿತಂದುಕೊಟ್ಟ ಇನ್ನೊಂದು ಪಾತ್ರ ಶ್ರೀಕೃಷ್ಣ. ಜಾಂಬವತಿಕಲ್ಯಾಣ, ಕನಕಾಂಗಿಕಲ್ಯಾಣ, ರುಕ್ಮಾವತಿಕಲ್ಯಾಣ, ರುಕ್ಮಿಣಿಕಲ್ಯಾಣ, ಸುಭದ್ರಾಕಲ್ಯಾಣ, ಯಾವುದೇ ಪ್ರಸಂಗದ ಕೃಷ್ಣನಿದ್ದರೂ ಅವರ ಕೃಷ್ಣನ ಪಾತ್ರದ ನಡೆಯೇ ವಿಶಿಷ್ಟ. ತಮ್ಮ ಮಾತಿನ ಮೋಡಿಯಿಂದ ಅವರೆಂದೂ ರಂಗಸ್ಥಳದ ಆವರಣಭಂಗ ಮಾಡಿದವರಲ್ಲ. ಪ್ರಸಂಗ ಸಾಹಿತ್ಯ ದಸದಾಶಯವನ್ನು ಬಿಡದೆ ಪ್ರತಿಪಾದಿಸಿ ಕಡೆದು ನಿಲ್ಲಿಸಿದ ಬಿಂಬದ ಸ್ವರೂಪವನ್ನು ಸುಲಲಿತವಾಗಿ ಪ್ರೇಕ್ಷಕರಿಗೆ ದಾಟಿಸುವ ಚಾಕಚಕ್ಯತೆ, ಆಕರ್ಷಕವಾದ ನಿರೂಪಣೆ, ವಿಷಯಸಂಪತ್ತು ಆಚಾರ್ಯರ ಹೆಚ್ಚುಗಾರಿಕೆ. ಚಂದ್ರಹಾಸನಾಗಿ "ಅರರೇ ಏನ್ನೊ ಬಗುಕಾಣುವುದಿಲ್ಲಿ ನೇತ್ರ ಸಹಹರುಷವಕಾಂಬತೆರನಿಲ್ಲಿ"ಪದ್ಯದ ಅರ್ಥಗಾರಿಕೆಯೊಂದೇ ಸಾಕು ಅವರ ಮಾತುಗಾರಿಕೆಯನ್ನು ನಿರ್ಣಯಿಸಲು." ಎನ್ನುತ್ತಾರೆ ಉದಯಕುಮಾರಶೆಟ್ಟಿಯವರು.

**ವೃತ್ತಿಬದುಕಿನಲ್ಲಿ ಮೆಚ್ಚಿದ ಮೂವರು ಯಕ್ಷಕಲಾವಿದರು:**

ನಗರಜಗನ್ನಾಥಶೆಟ್ಟಿ: ಬಾಲಕಲಾವಿದನಾಗಿ ನಾಗರಕೊಡಿಗೆ ಮೇಳದಲ್ಲಿದ್ದಾಗಲೇ ನಗರ ಜಗನ್ನಾಥರಂತಹ ಶ್ರೇಷ್ಠಕಲಾವಿದರ ಒಡನಾಟದಿಂದ ಆಚಾರ್ಯರು ರಂಗದಲ್ಲಿ ಕಲಿಯುತ್ತಾ ಬಂದವರು. ಪ್ರೇಕ್ಷಕರಿಂದ 'ರಂಗಸ್ಥಳದರಾಜ' ಎಂಬ ಖ್ಯಾತಿಗೆ ಪಾತ್ರರಾದ ಶೆಟ್ಟರಭೀಷ್ಮ, ರಾಮ, ನರಕಾಸುರ, ಲವಣಾಸುರ, ಬೃಹದ್ರಥ, ಬಲರಾಮ, ವಲಲ, ಸುಂದರರಾವಣ, ಉಗ್ರಸೇನ, ಚಾರುದತ್ತ, ಶುಭ್ರಾಂಗ ಮುಂತಾದ ಪಾತ್ರಗಳನ್ನು ಹತ್ತಿರದಿಂದ ಕಂಡು ಮೆಚ್ಚಿಕೊಂಡವರು. ಮಾತುಗಾರಿಕೆಯಲ್ಲಿ ತಮ್ಮದೇ ಆದಶೈಲಿಯನ್ನು ಹೊಂದಿದ್ದ ಶೆಟ್ಟರವಿಶಿಷ್ಟ ರಂಗಪ್ರವೇಶ, ಮಾತಿನಗತ್ತು, ಗಾಂಭೀರ್ಯ ಯಾರೂ ಮೆಚ್ಚುವಂಥದ್ದು.

International Journal of Research in Social Sciences
Vol. 7Issue 1, January 2017,
ISSN: 2249-2496 Impact Factor: 7.081
Journal Homepage: http://www.ijmra.us, Email: editorijmie@gmail.com Double-Blind Peer Reviewed Refereed Open Access International Journal - Included in the International Serial Directories Indexed & Listed at: Ulrich's Periodicals Directory ©, U.S.A., Open J-Gate as well as in Cabell's Directories of Publishing Opportunities, U.S.A

ಹಿರಿಯ ಕಲಾವಿದರನ್ನು ಗೌರವದಿಂದಲೂ, ಸಮಕಾಲೀನಕಲಾವಿದರನ್ನು ಸ್ನೇಹದಿಂದಲೂ, ಕಿರಿಯರನ್ನು ಪ್ರೀತಿಯಿಂದಲೂ ಕಾಣುವ ಅವರಗುಣ ಅನ್ಯತ್ರದುರ್ಲಭ. ಜಗನ್ನಾಥರ ಕಲಾಪ್ರತಿಭೆ ಮತ್ತು ಸದ್ಗುಣಗಳಿಂದ ಆಚಾರ್ಯರು ಸಾಕಷ್ಟು ಪ್ರಭಾವಿತರಾಗಿದ್ದುದು ನಿಜ.

**ಶಿರಿಯಾರಮಂಜುನಾಥನಾಯ್ಕರು:**ಬಡಗುತಿಟ್ಟಿನ ಒಬ್ಬ ಅಭಿಜಾತ ಕಲಾವಿದರಾಗಿ ಗತತಲೆಮಾರಿನ ಯಕ್ಷಕಲಾವಿದರಲ್ಲಿ ಉನ್ನತ ಶ್ರೇಣಿಗೆ ಸಂದವರಲ್ಲೊಬ್ಬರು. ಅಗ್ರಮಾನ್ಯ ಪುರುಷವೇಷಧಾರಿಯಾಗಿ ಐದು ದಶಕಗಳ ಕಾಲ ಮೆರೆದ ಶಿರಿಯಾರರು ಶ್ರೀಕೃಷ್ಣನ ಪಾತ್ರನಿರ್ವಹಿಸಿ 'ಅಭಿನವಶ್ರೀಕೃಷ್ಣ' ಎನಿಸಿಕೊಂಡವರು. "ಮಾತುಗಾರರು ಎಷ್ಟೋ ಮಂದಿ ಇರಬಹುದು, ಅರ್ಥಧಾರಿಮಂಜುವೊಬ್ಬನೇ" ಎಂಬ ಮಾತು ಜನರಲ್ಲಿದ್ದುದು ಅತಿಶಯೋಕ್ತಿಯೆನಿಸದು. ಅರ್ಥ ಹೇಗಿರಬೇಕೆಂಬುದಕ್ಕೆ ಶಿರಿಯಾರರು ಮಾದರಿ. ಅವರ ಶ್ರುತಿಬದ್ಧ ಸಂಭಾಷಣಾವೈಖರಿ, ಕೋಮಲವಾದಕಂಠ, ವ್ಯಾಕರಣಶುದ್ಧ ಮಾತು, ವೇಷಧಾರಿಕೆಯ ಜೊತೆಗೆ ಭಾಗವತಿಕೆಯನ್ನೂ ಸಿದ್ಧಿಸಿಕೊಂಡ ಅರ್ಥಗಾರಿಕೆ, ಶಾಸ್ತ್ರೀಯ ನಡೆ ಎಲ್ಲವನ್ನೂ ಗಮನಿಸಿದ ಆಚಾರ್ಯರು ಅವರನ್ನು ಗುರುಸ್ಥಾನದಲ್ಲಿ ಇರಿಸಿಕೊಂಡರು. "ಮಧ್ಯಮತಿಟ್ಟಿನ ಶ್ರೇಷ್ಠಕಲಾವಿದರಾಗಿ ದಕ್ಷಿಣೋತ್ತರ ಕನ್ನಡಜಿಲ್ಲೆಯ ಯಾವ ಕಲಾವಿದರಿಗೂ ಏನೂ ಸೊಪ್ಪು ಹಾಕದೆ ಸರಿಸಮಾನವಾಗಿ ಜಯಿಸಿಬರುವ ಒಬ್ಬ ಕಲಾವಿದರೆಂದರೆ ಶಿರಿಯಾರರು" ಎಂದು ಶ್ಲಾಘಿಸುತ್ತಾರೆ. ಮಂಜುನಾಯ್ಕರ ಕೆಲವುಪಾತ್ರಗಳು ಆಚಾರ್ಯರ ಮೇಲೆ ವಿಶೇಷ ಪ್ರಭಾವ ಬೀರಿದ್ದರಲ್ಲಿ ಆಶ್ಚರ್ಯವಿಲ್ಲ.

**ಚಿಟ್ಟಾಣಿರಾಮಚಂದ್ರಹೆಗಡೆ :** ಬಡಗುತಿಟ್ಟಿನ ಮೇರುಕಲಾವಿದರಾಗಿ ನಾಡಿಗೊಂದು ಆಸ್ತಿ ಎನಿಸಿಕೊಂಡವರು ಚಿಟ್ಟಾಣಿವರು. ಏಳನೇ ವಯಸ್ಸಿಗೆ ರಂಗಪ್ರವೇಶಿಸಿದ ಅವರು ಎಂಬತ್ತು ದಾಟಿದರೂ ರಂಗದಲ್ಲಿ ಉತ್ಸಾಹ ಕುಂದದ ಅಪ್ರತಿಮ ಕಲಾವಿದರು. ಎರಡನೇ ತರಗತಿ ಓದಿದರೂ, ಸ್ವಂತ ಅಧ್ಯಯನದಿಂದ ರಾಮಾಯಣ ಮಹಾಭಾರತ, ಭಾಗವತಗಳನ್ನು ಕರತಲಾಮಲಕಮಾಡಿಕೊಂಡವರು. ಅದ್ಭುತನಟನಾಗಿ ಆಗಿನ ಕಾಲಕ್ಕೆ ನಾಟ್ಯದಲ್ಲಿ ಹೊಸತನತಂದವರು ಅವರು. ಪ್ರೇಕ್ಷಕರಿಗೆ ಕುಣಿತದಲ್ಲಿ ಹೊಸತನ್ನು ತೋರಿಸಬೇಕೆಂಬ ಆಕಾಂಕ್ಷೆ ಅವರಲ್ಲಿತ್ತು. ತಮ್ಮ ನಾಟ್ಯಶೈಲಿಯ ಆಕರ್ಷಣೆಯಿಂದಾಗಿ ಪ್ರೇಕ್ಷಕರನ್ನು ತಮ್ಮೆಡೆಗೆ ಸೆಳೆದುಕೊಳ್ಳುತ್ತಿದ್ದ ಅವರಚುರುಕುನಡೆ, ತ್ವರಿತಗತಿ, ಅದ್ಭುತಲಯಬದ್ಧನಾಟ್ಯ, ಅಭಿನಯ, ಮಾತುಗಾರಿಕೆ ಪ್ರತಿಯೊಂದೂ ಗೋಪಾಲರ ಮನಸೆಳೆದಿತ್ತು. ಒಬ್ಬ ಕಲಾವಿದ ತನ್ನ ಕಲಾ ಶ್ರೀಮಂತಿಕೆಯಿಂದ ಎಷ್ಟು ಎತ್ತರಕ್ಕೆ ಏರಬಲ್ಲನೆಂಬುದಕ್ಕೆ ಚಿಟ್ಟಾಣಿಯವರು ಜ್ವಲಂತ ಉದಾಹರಣೆ ಎಂದಿದ್ದಾರೆ. ಯಕ್ಷಗಾನನನ್ನ ಜೀವದುಸಿರು, ಉಸಿರಿರುವವರೆಗೂ ವೇಷಕಟ್ಟಿ ಕುಣಿಯಬೇಕೆಂದ ಚಿಟ್ಟಾಣಿಯವರ ಪಾತ್ರತಾದಾತ್ಮ್ಯ ಅನನ್ಯವಾದದ್ದು. ರಂಗಕರ್ಮದಲ್ಲೆಲ್ಲೂ ರಾಜಿಮಾಡಿಕೊಳ್ಳ ದನಿಷ್ಕ ಪಟಕಲಾವಿದ ಚಿಟ್ಟಾಣಿಯವರ ಭಸ್ಮಾಸುರ, ಕೀಚಕ, ಮಾಗಧ, ಕಂಸ, ಕೌರವ, ದುಷ್ಟಬುದ್ಧಿ, ರುದ್ರಕೋಪ ಮೊದಲಾದ ಪಾತ್ರಗಳಿಗೆ ಮರುಳಾಗದವರಾರು? ಚಿಟ್ಟಾಣಿಯವರಿಗೆ ಚಿಟ್ಟಾಣಿಯವರೇ ಸಾಟಿ. ಅವರ ಕೆಲವು ಪಾತ್ರಗಳು, ನಾಟ್ಯಶೈಲಿ ಮತ್ತು ವೈಯಕ್ತಿಕ ರಂಗ ನಿಲುವುಗಳು ತಮ್ಮ ಮೇಲೆ ಪ್ರಭಾವ ಬೀರಿದ್ದನ್ನು, ತಾವು ಸಾಧ್ಯವಾದಷ್ಟು ಮಟ್ಟಿಗೆ ಅನುಸರಿಸಿದ್ದನ್ನು ಆಚಾರ್ಯರು ಸಹಜವಾಗಿ ಬಿಚ್ಚಿಡುತ್ತಾರೆ.

ಗೋಪಾಲಾಚಾರ್ಯರಲ್ಲಿ ವಿಶೇಷವಾಗಿ ಗುರುತಿಸಬಹುದಾದದ್ದು ಅವರ ನೃತ್ಯಶೈಲಿಯನ್ನು. ವೃತ್ತಿರಂಗದಲ್ಲಿ ಕೆರೆಮನೆ ಕಲಾವಿದರು ಮತ್ತು ಹಾರಾಡಿ ಕಲಾವಿದರನ್ನು ಬಿಟ್ಟರೆ, ಉಳಿದೆಲ್ಲ ಕಲಾವಿದರ ಒಡನಾಡಿಯಾಗಿ ದುಡಿದ ಇವರಲ್ಲಿ ಬಡಗು ಮತ್ತು ಬಡಾಬಡಗು ಎಂಬೆರಡು ಪ್ರಮುಖ ನೃತ್ಯಶೈಲಿಯನ್ನು ಕಾಣಬಹುದು. ಶ್ರುತಿಬದ್ಧತೆ ಹಾಗೂ ಮಾತುಗಾರಿಕೆಯಲ್ಲಿ ಅವರ ದೀರ್ಘಕಾಲದ ಒಡನಾಡಿಗಳಾದ ಶಿರಿಯಾರಮಂಜುನಾಯ್ಕ ಮತ್ತು ನಗರಜಗನ್ನಾಥಶೆಟ್ಟಿಯವರ ಪ್ರಭಾವವನ್ನು ಗುರುತಿಸಬಹುದು. ಪುಂಖಾನುಪುಂಖವೆಂಬಂತೆ ನಿರರ್ಗಳ, ನಿರಾತಂಕ, ನಿರಾಯಾಸದಿಂದ ಶ್ರುತಿಬದ್ಧವಾಗಿ ಹರಿದುಬರುವ ಆಚಾರ್ಯರ ಮಾತುಗಾರಿಕೆಯಲ್ಲಿ ಮೇಲಿನ ಈರ್ವರು ಹಿರಿಯ ಕಲಾವಿದರ ಪ್ರಭಾವವನ್ನು ಗುರುತಿಸಬಹುದು. ರಸಭಾವಗಳ ಪರಿಪೂರ್ಣ ಪೋಷಣೆಯಲ್ಲಿ ಅವರು ತೋರಿಸುವ ಅಸಾಧಾರಣ ಪ್ರತಿಭೆ ನಿಜಕ್ಕೂ ಪ್ರಶಂಸಾರ್ಹ. ಅರ್ಜುನನು "ಆವರಾಯನಾತ್ಮಭವನೋವೀರನೀತ" ಎಂದು ಹೀಯಾಳಿಸುವಾಗ ನಖಶಿಖಾಂತ ಕೋಪಾವಿಷ್ಟನಾಗಿ ಮಾತನಾಡುವ ಬಭ್ರುವಾಹನನಿರಲಿ, "ತಿಳಿದೆನು ನಿನ್ನಯ ಚಿತ್ತದುಮ್ಮಳವ" ಎನ್ನುವಲ್ಲಿ

**International Journal of Research in Social Sciences**
Vol. 7Issue 1, January 2017,
ISSN: 2249-2496 Impact Factor: 7.081
Journal Homepage: http://www.ijmra.us, Email: editorijmie@gmail.com Double-Blind Peer Reviewed Refereed Open Access International Journal - Included in the International Serial Directories Indexed & Listed at: Ulrich's Periodicals Directory ©, U.S.A., Open J-Gate as well as in Cabell's Directories of Publishing Opportunities, U.S.A

ಮೋಕ್ಷಕ್ಕೆ ಸನ್ನಿಹಿತನಾದ ಭಕ್ತಿ ಭಾವದ ಸುಧನ್ವನಿರಲಿ, "ಸುರಿವ ಕಂಬನಿಯನ್ನು ಸೆರಗಿಂದೊರೆಸಿ ಮಾತೆಯ ಪಾದರಜವನು" ಎನ್ನುವಲ್ಲಿ ದ್ವಂದ್ವಕ್ಕೆ ಸಿಲುಕಿದ ಅಭಿಮನ್ಯುವಿರಲಿ, "ಮಲಗಿರುವ ಪಿತನನ್ನು ಎಬ್ಬಿಸುತ ಗಾಂಗೇಯ" ಎನ್ನುವಲ್ಲಿ ತಂದೆಗೆ ಮದುವೆ ಮಾಡಿಸುವ ದೇವವ್ರತನಿರಲಿ, "ಬಂದೆಯ ಇನವಂಶವಾರಿಧಿಚಂದಿರನೆ" ಎನ್ನುವಲ್ಲಿ ಭರತನಲ್ಲಿರುವ ರಾಮನ ಭ್ರಾತೃವಾತ್ಸಲ್ಯವಿರಲಿ, "ಪುರಜನರನುಡಿ ಕೇಳಿಹರಿಯು ತನ್ನ ಯಮನದಿ" ಎನ್ನುವಲ್ಲಿ ಮೈಂದದಿವಿಜರನ್ನು ನೆನೆಸಿಕೊಳ್ಳುವ ಕೃಷ್ಣನಿರಲಿ, ಇಲ್ಲೆಲ್ಲಾ ಆಚಾರ್ಯರ ಮಾತುಗಾರಿಕೆಯ ಮೋಡಿ ವರ್ಣಿಸಲಸದಳ. ಶೂದ್ರತಪಸ್ವಿನಿ, ಪದ್ಮಪಲ್ಲವಿ, ನಾಗವಲ್ಲಿಯಂತಹ ಹೊಸ ಸಾಮಾಜಿಕ ಪ್ರಸಂಗ ಪಾತ್ರಗಳಲ್ಲೂ ಇವರ ಸಭಾವಾಭಿನಯ ಹಾಗೂ ಮಾತುಗಾರಿಕೆಯ ಸಾಮರ್ಥ್ಯವನ್ನು ಮನಗಾಣಬಹುದು. ತೀರ್ಥಹಳ್ಳಿ ಗೋಪಾಲರು ಯಾವುದೇ ಪಾತ್ರದಲ್ಲಿ ರಂಗಕ್ಕೆ ಬಂದರೆಂದರೆ ಮಿಂಚಿನ ಸಂಚಾರವಾದಂತೆ. 'ರಂಗಸ್ಥಳದಕೋಲ್ಮಿಂಚು' ಎಂದು ಪ್ರೇಕ್ಷಕರಿಂದ ಕರೆಯಿಸಿಕೊಂಡಿದ್ದೂ ಇದೆ. ಅವರ ನಾಟ್ಯಭಂಗಿಯ ಸುಂದರ ಶೈಲಿಗೆರಂಗ ಸ್ಥಳವೇ ತುಂಬಿಬಂದಂತೆ. ಅರುವತ್ತು ದಾಟಿದರೂ ಹದಿನೆಂಟು ಇಪ್ಪತ್ತರ ಹುಡುಗರನ್ನೂ ನಾಚಿಸುವ ನಾಟ್ಯ ಅವರದು. ಓದು ಕಡಿಮೆಯಾದರೂ ಬಯಲು ರಂಗಸ್ಥಳವೇ ಅವರ ಪಾಲಿಗೆ ವಿದ್ಯಾನಿಲಯವಾಗಿ ಅಲ್ಲಿ ಕಲಿತದ್ದೇ ಹೆಚ್ಚು. ಇಂದು ಯಕ್ಷಗಾನರಂಗಕ್ಕೆ ಹೆಚ್ಚು ಹೆಚ್ಚು ಕಲಿತ ಮಂದಿ ಬರುತ್ತಿದ್ದಾರಾದರೂ ಗೋಪಾಲರು ಅವರಿಗಿಂತ ಯಾವುದರಲ್ಲೂ ಕಡಿಮೆಯಲ್ಲ. ರಂಗದ ಹೊರಗೆ ಚೌಕಿಯತ್ತ ಮಾತನಾಡಿಸಲು ಹೋದರೆ ಅವರ ವಿನಯಪೂರ್ವಕ ವ್ಯಕ್ತಿತ್ವದ ಪರಿಚಯವಾಗುತ್ತದೆ. "ಬಡಗುತಿಟ್ಟು ಇಂಥ ಕಲಾವಿದರನ್ನು ಪಡೆದದ್ದು ಭಾಗ್ಯವೆನ್ನಬೇಕು. ಅವರ ರಂಗನಡೆ ಅನುಕರಣೆ ಮತ್ತು ಅನುಸರಣೆಗೆ ಯೋಗ್ಯವಾದುದು. ಮುಂದಿನ ಜನಾಂಗಕ್ಕೆ ಅವರ ಹೆಜ್ಜೆಗಾರಿಕೆ ಮತ್ತು ಮಾತುಗಾರಿಕೆಯ ಶೈಲಿ ಅವಶ್ಯವಾಗಿಬೇಕೆನಿಸುತ್ತದೆ. ಯಕ್ಷಗಾನ ಅಕಾಡೆಮಿಯಾಗಲಿ, ಸಂಘಟಕರಾಗಲಿ ಮುಂದೆ ಬಂದು ಗೋಪಾಲರ ಕಲಾವಂತಿಕೆಯಸಾಕ್ಷ್ಯ ಚಿತ್ರಮಾಡಿ ಕಾಪಿಟ್ಟುಕೊಳ್ಳಬೇಕಾಗಿದೆ" ಎನ್ನುತ್ತಾರೆ ಪ್ರಸಂಗ ಕರ್ತೃ ದಯಾನಂದಬಳ್ಕೂರು.

ಮಲೆನಾಡಿನ ಮಡಿಲಿನಿಂದ ಕರಾವಳಿ ಯಕ್ಷರಂಗಕ್ಕೆ ಬಂದ ಪ್ರತಿಭಾಶಾಲಿ ಕಲಾವಿದ ಆಚಾರ್ಯರು ಬಡತನದ ಸಂಕಷ್ಟಗಳ ಮಧ್ಯೆ ಯಕ್ಷಗಾನವನ್ನೇ ನೆಮ್ಮಿಕೊಂಡು ವೃತ್ತಿಯನ್ನಾಗಿ ಸ್ವೀಕರಿಸಿದವರು. ಪೂರ್ವರಂಗದಲ್ಲಿ ಸಾಕಷ್ಟು ನುರಿತು ಹಂತಹಂತವಾಗಿ ಬೆಳೆದವರು. ಅಭಿಮನ್ಯು, ಧರ್ಮಾಂಗದ, ಪುಷ್ಕಳ, ಲವ–ಕುಶ, ವೃಷಸೇನ ಮೊದಲಾದ ತರುಣ ವೀರರಪುಂಡು ವೇಷಗಳಲ್ಲಿಯೇ ಅವರಿಗೆ ಒಲವು ಹೆಚ್ಚು. ಒಂದರಿಂದ ಮತ್ತೊಂದಕ್ಕೆ ಪುಟಿದೇಳುತ್ತಾ ಪುಂಡುವೇಷಗಳಲ್ಲಿ ಸೈ ಎನಿಸಿಕೊಂಡರು. ಪುಂಡುವೇಷಗಳಲ್ಲಿ ಬೆಂಕಿಯ ಚೆಂಡಾಗಬಲ್ಲ ಆಚಾರ್ಯರು ಸುಧನ್ವ, ಅರ್ಜುನ, ಶ್ರೀಕೃಷ್ಣ, ಚಂದ್ರಹಾಸ, ಮಾರ್ತಾಂಡತೇಜ, ಹೀಗೆ ಯಾವುದೇ ಪುರುಷಪಾತ್ರವಿದ್ದರೂ ಅದಕ್ಕೆ ಜೀವಂತಿಕೆಯ ಕಳೆ ನೀಡಿ ತಮ್ಮ ಛಾಪು ಮೂಡಿಸುವವರು. ರಂಗಮಂಚವೇರಿದರೆ ಆಚಾರ್ಯರ ನೃತ್ಯಕೌಶಲ್ಯ ಬೆರಗುಗೊಳಿಸುವಂಥದ್ದು. ಕೇದಗೆ ಮುಂದಲೆ ವೇಷಕ್ಕೆ ಹೊಂದಿಕೊಳ್ಳುವ ಆಳಂಗವಿದ್ದು ಆವೇಷಕ್ಕೆ 'ನಭೂತೋ' ಎಂಬುದನ್ನು ನಿರ್ಭಿಡೆಯಿಂದ ಹೇಳಬಹುದು. ಭವಿಷ್ಯದಲ್ಲಿ ಅವರ ಹೆಸರನ್ನು ಅಳಿಸಿ ಹಾಕಬಲ್ಲ ಸಮರ್ಥರೊಬ್ಬರು ಬರಬೇಕಷ್ಟೆ. ನಿರಂತರ ಪ್ರೇಕ್ಷಕರ ನೆನಪಿನಲ್ಲಿರಬಹುದಾದ ಪುಂಡುವೇಷ ಅವರದು. ಅವರ ಧೀಂಗಿಣದ ಪ್ರವೇಶಕ್ಕೇ ಜನರೋಮಾಂಚನಗೊಳ್ಳುತ್ತಾರೆ. ಯಕ್ಷರಂಗದ ಯಾವುದೋ ಒಂದು ವಿಭಾಗದಲ್ಲಿ ಮಾತ್ರವಲ್ಲ, ಸರ್ವಾಂಗ ನಿಪುಣಕಲಾವಿದರವರು. "ಗುಣಾಧಿಕ್ಯದಿಂದ ದೋಷ ಅಡಗುವುದು, ದೋಷಾಧಿಕ್ಯದಿಂದ ಗುಣ ಅಡಗುವುದು ಎಂಬ ಮಾತೊಂದಿದೆ. ಚಿಟ್ಟಾಣಿಯವರು ನೃತ್ಯಾಭಿನಯದಲ್ಲಿ ಉತ್ತುಂಗಕ್ಕೇರಿದವರಾದರೂ ಮಾತುಗಾರಿಕೆಯಲ್ಲಿ ಸ್ವಲ್ಪ ಹಿಂದೆ. ಶೇಣಿಯವರು ಮಾತುಗಾರಿಕೆಯಲ್ಲಿ ಸಿದ್ಧ ಹಸ್ತರಾದರೂ ನೃತ್ಯದಲ್ಲಿ ಹಿಂದೆ. ಆದರೆ ಇಬ್ಬರೂ ಮೇರು ಕಲಾವಿದರೆನಿಸಿಕೊಂಡರು. ಮೂರ್ತಿ ಚಿಕ್ಕದಾದರೂ ಗೋಪಾಲರಲ್ಲಿ ನೃತ್ಯ, ಅಭಿನಯ, ವೇಷಭೂಷಣ, ಭಾವಾರ್ಥವನ್ನು ಬಿಡದಸ್ಪಷ್ಟ ಮಾತುಗಾರಿಕೆ, ರಂಗದ ಹೊರಗೂ ಇರಬೇಕಾದ ಸಾತ್ವಿಕಗುಣ, ಅಂದರೆ ಒಬ್ಬ ಕಲಾವಿದನಿಗೆ ಬೇಕಾಗುವಷ್ಟು ಎಲ್ಲವೂ ಇದೆ. ಸಜ್ಜನನಾಗಿರಂಗದ ಒಳಗೂ ಹೊರಗೂ ಬದುಕಿದ ಕಲಾವಿದರವರು. ಆದ್ದರಿಂದಲೇ ನಾನು ಅವರೊಬ್ಬ ಪರಿಪೂರ್ಣ ಕಲಾವಿದನೆಂದಿದ್ದು. ಶುಕ್ಲದ ಚಂದ್ರಮನಂತೆ ಏರುತ್ತಾ

ಹೋದ ಅವರು ಬಡಗುತಿಟ್ಟಿನ ಅಪ್ರತಿಮ ಕಲಾವಿದರೆಂಬಲ್ಲಿ ಸಂದೇಹವಿಲ್ಲ." ಎನ್ನುತ್ತಾರೆ. ಎಂ.ಕೆ. ರಮೇಶಆಚಾರ್ಯರು.

ಗೋಪಾಲರು ಯಾವುದೇ ಪಾತ್ರನಿರ್ವಹಿಸಲಿ, ಅವರ ಪಾತ್ರ ಪೋಷಣೆಯಲ್ಲಿ ರಂಗವನ್ನು ಹಾಳುಗೆಡಹುವ ಬಗೆಯಿಲ್ಲ. ಪ್ರೇಕ್ಷಕರ ಯಾವುದೇ ಕ್ಷುದ್ರ ಅಭಿರುಚಿಗೆ ಸ್ಪಂದಿಸುವ ಬಗೆಯೂ ಅವರಲ್ಲಿಲ್ಲ. ಪಾತ್ರದ ಪರಕಾಯಪ್ರವೇಶ ಮಾಡುವ ಬಗೆ ಮಾತ್ರ ಅವರಲ್ಲಿರುವುದನ್ನು ನಾವು ವಿಶೇಷವಾಗಿ ಗಮನಿಸಬಹುದು. ರಂಗದ ಮೇಲಿರುವ ಕಲಾವಂತಿಕೆ ಹಾಗೂ ರಂಗದ ಹೊರಗಿನ ಸಜ್ಜನತ್ವದಿಂದಾಗಿ ಯಕ್ಷಗಾನಕ್ಷೇತ್ರದಲ್ಲಿ ಅವರನ್ನು ತೆಂಕು, ಬಡಗು, ಮಲೆನಾಡು ಹಾಗೂ ಬಡಾಬಡಗಿನ ಪ್ರೇಕ್ಷಕರೆಲ್ಲರೂ ಮೆಚ್ಚುತ್ತಾರೆ. 'ಚೌಕಿಯಲ್ಲಿ ನಾನೇನೂ ಅಲ್ಲ, ರಂಗಸ್ಥಳದಲ್ಲಿ ನಾನೇ ಎಲ್ಲಾ' ಎಂಬ ಮಾತಿಗೆ ಸಾಕ್ಷಿಯಾಗಬಲ್ಲವರು ಅವರು. ಕೃಷ್ಣನ ಪಾತ್ರ ಅವರು ರಂಗಕ್ಕೆ ಬಂದಮೇಲೆ ಅವರಿಗೇ ಮೀಸಲು. ಕಸೆ ಹಾಕಿ ರಂಗಕ್ಕಿಳಿದರೆಂದರೆ ಪ್ರೇಕ್ಷಕರಕಣ್ಣು, ಕಿವಿ, ಮೈಮನಗಳೆಲ್ಲ ಎಚ್ಚರ. ಅವರ ಪಾತ್ರಪೋಷಣೆ, ರಂಗದನಡೆಗಳಲ್ಲಿ ಶ್ರದ್ಧೆಯ ದುಡಿಮೆ ಇರುವುದನ್ನು ಕಲಾಪೋಷಕರು, ಅಭಿಮಾನಿಗಳು, ವಿಮರ್ಶಕರು, ಒಡನಾಡಿಕಲಾವಿದರೆಲ್ಲ ಮೆಚ್ಚಿತಲೆ ದೂಗುತ್ತಾರೆ. ಪಾತ್ರ ನಿರ್ವಹಣೆಯ ವಿಚಾರದಲ್ಲಿ ಬಹಳ ಚಿಂತನೆಯನ್ನು ನಡೆಸುವ ಕಲಾವಿದರು ಅವರು. "ನಾನೇ ಕೆಲವು ಪ್ರಸಂಗಗಳ 'ರಿಹರ್ಸಲ್' ನಡೆಯುತ್ತಿರುವಲ್ಲಿ ಹೋಗಿದ್ದೆ. ಆಚಾರ್ಯರಂಥವರೇ ನಮ್ಮಂಥವರಲ್ಲಿ ಅರ್ಥ ಹೇಗೆ? ಹೇಗೆ ನಡೆದರೆ ಚೆನ್ನ? ಎಂದು ಕೇಳುವಾಗ ನಿಜಕ್ಕೂ ಮುಜುಗರವಾಗುತ್ತಿತ್ತು. 'ಪ್ರಸಂಗಕರ್ತರ ಪಾತ್ರದ ಆಶಯಕ್ಕೆ ಕಿಂಚಿತ್ತೂಧಕ್ಕೆ ಬರಬಾರದು. ಅದಕ್ಕಾಗಿ ಅಭ್ಯಾಸ ಮಾಡಲೇಬೇಕು, ಪ್ರಯತ್ನಿಸುತ್ತೇನೆ.' ಎಂದೆನ್ನುವಾಗ ನಮಗೆ ಅವರಲ್ಲಿರುವ 'ಕವಿಮರ್ಯಾದೆ'ಯ ಗುಣವಿದ್ದು ಕಾಣುತ್ತದೆ. ಈ ಗುಣಕಾಣುವುದು ಕೆಲವೇ ಕೆಲವು ಕಲಾವಿದರಲ್ಲಿ ಮಾತ್ರ." ಎನ್ನುತ್ತಾರೆ ಮತ್ತೋರ್ವ ಪ್ರಸಂಗ ಕರ್ತೃ ಎಂ.ಎಚ್.ಪ್ರಸಾದಕುಮಾರ್ಮೊಗೆಬೆಟ್ಟು. ಪುರಾಣಲೋಕ ಬಿಟ್ಟು ಗೋಪಾಲರು ಸಾಮಾಜಿಕ ಮತ್ತಿತರ ಪ್ರಸಂಗಗಳಿಗೆ ಅನಿವಾರ್ಯವಾಗಿ ಇಳಿದರೂ ರಂಗ ಸಂವಿಧಾನದ ಚೌಕಟ್ಟಿನ ಆಚೆಗೆ ಹೋದವರಲ್ಲ. ಪ್ರೇಕ್ಷಕರು ನಾಲ್ಕಾರು ಮಂದಿಯೇ ಇರಲಿ, ತಾವು ಪಾತ್ರ ನಿರ್ವಹಣೆಯಲ್ಲಿ ಎಚ್ಚರ ತಪ್ಪುವವರಲ್ಲ. ಇಂತಹ ಪಾತ್ರನಿಷ್ಠೆಯ ಗುಣವನ್ನು ಚಿಟ್ಟಾಣಿಯವರ ನಂತರ ನಾವು ಕಾಣುವುದು ಗೋಪಾಲರಲ್ಲಿ. ಆಧುನಿಕ ಸಂದರ್ಭದಲ್ಲಿ ಗೋಪಾಲರು ತಾರಾಮೌಲ್ಯವಿರುವ ಕಲಾವಿದರು. ಅರುವತ್ತು ದಾಟಿದರೂ ಕೂಡ ಇಂದಿಗೂ ಗೋಪಾಲರೇಬೇಕು ಎನ್ನುವ ಸಂಘಟಕರೂ, ಪ್ರೇಕ್ಷಕರೂ ಇದ್ದಾರೆ. ಕಲೆಗಾಗಿಯೇ ತಮ್ಮನ್ನು ಮುಡಿಪಾಗಿಟ್ಟ ಗೋಪಾಲರಿಗೆ ಯಕ್ಷಗಾನವೇ ಬದುಕಿನ ಸಾರಸರ್ವಸ್ವ. ಅವರೊಬ್ಬ ಕರ್ಮಯೋಗಿ, ಕಲಾತಪಸ್ವಿಯಂತೆ ಬದುಕಿದವರು.

ಪುಲಿಗೆರೆಯ ಸೋಮೇಶ್ವರ ಕವಿ ಹೇಳಿದಂತೆ, ಹಲವು ಹಳ್ಳಗಳು ಸೇರಿದರೆ ಸಮುದ್ರವೇ ಆಗುತ್ತದೆ. ಯಕ್ಷಗಾನದ ಕ್ಷೇತ್ರದಲ್ಲಿ ಬೆಳೆದು ಬಂದ ಪರಿಯನ್ನು ಗಮನಿಸಿದರೆ, ಆಚಾರ್ಯರಿಗೆ ಈ ಮಾತು ಚೆನ್ನಾಗಿ ಒಪ್ಪುತ್ತದೆ. ಶಾಲೆಯ ಓದು ಕಡಿಮೆಯಾದರೂ ರಂಗಸ್ಥಳದಲ್ಲಿ ಅವರು ಕಂಡು ಕೇಳಿ ತಿಳಿದುಕೊಂಡಿದ್ದೇ ಹೆಚ್ಚು. ಕಲೆಯ ಬೆಲೆಯನ್ನು ಅರಿತು, ಅದರಲ್ಲಿ ತನ್ನ ನೆಲೆಯನ್ನು ಕಂಡುಕೊಂಡು, ಸತತಾಭ್ಯಾಸ, ಪ್ರಯತ್ನ, ಪರಿಶ್ರಮದೊಂದಿಗೆ ಕಲಾ ಮಾತೆಯ ಸೇವೆ ಮಾಡುತ್ತಿದ್ದ ಆಚಾರ್ಯರಿಗೆ ತಾವು ಅರುವತ್ತರ ನಂತರ ನಿವೃತ್ತಿಯ ಮನಸ್ಸು ಮಾಡಿದ್ದೇಕೆ? ಎಂದು ಪ್ರಶ್ನಿಸಿದಾಗ, "ನನಗೆ ಕಳೆದ ಎರಡು ಮೂರು ವರ್ಷಗಳಿಂದಲೂ ತಲೆಸುತ್ತು ಬರುತ್ತಿತ್ತು. ಎರಡು ಮೂರು ಸಲ ಬಿದ್ದಿದ್ದೂ ಆಯ್ತು. ವೈದ್ಯರ ಪರೀಕ್ಷೆಯಲ್ಲಿ ರಕ್ತದೊತ್ತಡ ಮತ್ತು ಮಧುಮೇಹ ಎರಡೂ ಇದ್ದುದು ತಿಳಿಯಿತು. ಅವರ ಸಲಹೆಗೆ ಬದ್ಧನಾದ ನಾನು ಮುಂದೆ ನನ್ನ ಯಕ್ಷಗಾನ ವೃತ್ತಿಯಲ್ಲಿನ ಬದ್ಧತೆಯ ಬಗ್ಗೆ ಯೋಚಿಸಿದೆ. ಬದ್ಧತೆಯಿಲ್ಲದ ವೃತ್ತಿ ಬದುಕಿನಲ್ಲಿ ನನಗಾಸೆಯಿಲ್ಲ. ನನ್ನ ಗುರಿ ನನಗಿರುವ ಒಬ್ಬ ಮಗನನ್ನು ಸಾಕಷ್ಟು ಓದಿಸಿ ಅವನನ್ನು ಒಂದು ದಡ ಸೇರಿಸಬೇಕೆಂಬುದು. ಸುದೀರ್ಘ ಕಾಲ ಪೆರ್ಡೂರು ಮೇಳದಲ್ಲಿದ್ದುಕೊಂಡು ಯಜಮಾನರನ್ನೂ, ನನ್ನ ವೃತ್ತಿಯನ್ನೂ ಹಚ್ಚಿಕೊಂಡು ನನ್ನಿಂದಾದಷ್ಟು ಮಟ್ಟಿಗೆ ಮೇಳ ಮತ್ತು ಯಜಮಾನರಿಗೆ ಬದ್ಧನಾಗಿಯೇ ಇದ್ದಿದ್ದೆ. ಇನ್ನು ಮೇಲೆ ಆ ಬದ್ಧತೆಗೆಲ್ಲಿ ನನ್ನಿಂದ ಚ್ಯುತಿಬಂದೀತೇನೋ ಎಂಬ ಆತಂಕದಿಂದ ನಿವೃತ್ತಿ ಬಯಸಿದೆ. ಅನಾರೋಗ್ಯ ಒಂದು ಕಡೆಯಾದರೆ,

ವಯೋಸಹಜವಾಗಿ ನನ್ನ ದೇಹವೂ ವಿಶ್ರಾಂತಿಯನ್ನು ಬಯಸುತ್ತಿತ್ತು. ಮೇಳದಲ್ಲಿದ್ದ ಮೇಲೆ ನಮ್ಮ ಸಮಸ್ಯೆಯನ್ನು ಹೇಳಿಕೊಳ್ಳಬಾರದು, ಮೇಳದವರಿಗೂ ನಮ್ಮಿಂದ ಸಮಸ್ಯೆ ಆಗಬಾರದು. ಅದಕ್ಕಾಗಿಯೇ ಇದು ನನ್ನ ಸ್ವಯಂತೀರ್ಮಾನ. ನಿವೃತ್ತಿಗೊಂಡ ಮೇಲೆ ಮನೆಯಲ್ಲಿದ್ದುಕೊಂಡು ಯಾರಾದರೂ ಕರೆದರೆ, ದೇಹವು ಕೂಡಿದರೆ ಹೋದರಾಯಿತು." ಎಂದಿದ್ದಾರೆ. ಹೀಗೆ ವೃತ್ತಿಮೇಳದಿಂದ ನಿವೃತ್ತಿ ಹೊಂದಿದ ಆಚಾರ್ಯರು ಇದೀಗ ಕುಂದಾಪುರ ತಾಲ್ಲೂಕಿನ ನಾಯ್ಕನಕಟ್ಟೆಯ 'ಗೆಜ್ಜೆನಾದ' ನಿವಾಸದಲ್ಲಿದ್ದು, ಅತಿಥಿ ಕಲಾವಿದರಾಗಿ ಕಲಾಸೇವೆ ನಡೆಸುತ್ತಿದ್ದಾರೆ.

**ಯಕ್ಷಗಾನ ಮಕ್ಕಳ ಮೇಳದರೂ ವಾರಿಹೆಚ್. ಶ್ರೀಧರಹಂದೆಯವರು ಕಂಡಂತೆ:** "ಗೋಪಾಲಆಚಾರ್ಯರು ಡೇರೆಮೇಳದಲ್ಲಿ ಒಂದು 'ತುರುಪ್ಕಾರ್ಡ್' ಇದ್ದಂತೆ. ಹೊಸ ಪ್ರಸಂಗಗಳಿಗೆ ಪ್ರಾಧಾನ್ಯವಿದ್ದ ಕಾಲದಲ್ಲಿ ರಂಗಪ್ರವೇಶಿಸಿ, ಒಳ್ಳೆಯ ಬೇಡಿಕೆಯ ಕಲಾವಿದರಾಗಿ ಮೂಡಿಬಂದವರು. ಡೇರೆಮೇಳವನ್ನು ಉಳಿಸಿ ಬೆಳೆಸಬಲ್ಲಂಥ ಸಮರ್ಥರಲ್ಲಿ ಇವರೂ ಒಬ್ಬರು. ಮಟ್ಪಾಡಿ ವೀರಭದ್ರನಾಯಕರ ಕುಣಿತ, ಪಾತ್ರವೈಖರಿಯನ್ನು ಮೆಚ್ಚಿಕೊಂಡ ನನಗೆ ಗೋಪಾಲರಕುಣಿತ, ಮಾತುಗಾರಿಕೆ ನೋಡಿಮಟ್ಪಾಡಿಯವರನ್ನು ನೆನಪಿಸುವಂತೆ ಮಾಡಿದೆ. ರಂಗದ ಮೇಲೆ ಹಾರಾಡಿ ರಾಮಗಾಣಿಗರು, ಮಟ್ಪಾಡಿ ವೀರಭದ್ರನಾಯಕರಂತಹ ತೂಕವಿರುವ ಗೋಪಾಲರಲ್ಲಿ ದೈವದತ್ತವಾದ ಆಳಂಗದ ಕೊರತೆಯಿರುವುದು ಸಹಜ. ಹಾಗೆ ನೋಡಿದರೆ, ವೀರಭದ್ರನಾಯಕರ ಆಳಂಗದಲ್ಲೂ ಕೊರತೆಯಿತ್ತು. ಶಂಭು ಹೆಗಡೆಯವರಿಗೂ ಆಳಂಗದಲ್ಲಿ ಕೊರತೆ ಇರಲಿಲ್ಲವೇ? ಅವರೆಲ್ಲ ತಮ್ಮ ಇತರ ಕೌಶಲ್ಯಗಳಿಂದ ಮೇಲಕ್ಕೆ ಬಂದಿರಲಿಲ್ಲವೇ? ಆಚಾರ್ಯರದ್ದೂ ಹಾಗೆ ಅವರಲ್ಲಿ ಇತರ ಅನೇಕ ಗುಣಗಳಿರುವುದರಿಂದ ಮೇಲು ಮೇಲಕ್ಕೆ ಬಂದರು. ಆಚಾರ್ಯರರಂಗದಲ್ಲಿನ ನಿಲುವು, ಅರ್ಥಗಾರಿಕೆಯ ಏರಿಳಿತ, ಗಂಭೀರ ಹಾಗೂ ಶ್ರುತಿಬದ್ಧಸ್ವರ, ಪಾತ್ರೋಚಿತ ರಂಗಚಲನೆ, ಅಭಿನಯ, ಹೆಜ್ಜೆಗಾರಿಕೆ ಇವೆಲ್ಲ ಹಿತ, ಮಿತ, ಆಕರ್ಷಕ. ಎದುರು ವೇಷವನ್ನು ಯಾವತ್ತೂ ಕಡೆಗಣಿಸಲು ಬಯಸಿದವರಲ್ಲ. ಅನನುಭವಿ ಸಹಕಲಾವಿದರನ್ನು ರಂಗದಲ್ಲಿ ಸರಿದೂಗಿಸಿಕೊಂಡು ಹೋಗುವ ಇವರ ಸೌಜನ್ಯ, ರಂಗಸ್ಥಳದ ಮೇಲಿನ ಹಿಡಿತ ಮೆಚ್ಚುವಂಥದ್ದು. ಪಾತ್ರಗಳಲ್ಲಿನ ಆದರ್ಶವನ್ನು ನಿಜಜೀವನದಲ್ಲೂ ಅಳವಡಿಸಿಕೊಳ್ಳುವ ಆಚಾರ್ಯರಂಥ ಕಲಾವಿದರು ಸಿಗುವುದು ಅಪರೂಪ. ಯಾವುದೇ ದುಶ್ಚಟಗಳಿಗೆ ಅಂಟಿಕೊಳ್ಳದ ಶುಚೀಶೀಲದನಿಗರ್ವಿ, ಗುಣಗ್ರಾಹಿ ಕಲಾವಿದರವರು. ಯಾರೇ ಆಟಕ್ಕೆ ಕರೆದರೂ ನಿಗದಿತ ಸಮಯಕ್ಕೆ ಮೊದಲೇ ಹಾಜರಾಗುವ ಅವರ ಸಮಯ ಪ್ರಜ್ಞೆಗೂ ನಾವಿಂದು ಬೆಲೆಕೊಡಬೇಕಾಗಿದೆ. ಭಾಗವತರಾಗಲಿ, ವೇಷಧಾರಿಗಳಾಗಲಿ, ಇತರ ಯಾರೇ ಆಗಲಿ ಅವರನ್ನು ದೂರಿದ್ದನ್ನು ನಾನು ಕೇಳಿರಲಿಲ್ಲ. ತಮ್ಮ ಕಲಾತ್ಮಕ ಕೌಶಲಗಳಿಂದಲೂ, ಬದುಕಿನ ರೀತಿ ನೀತಿಗಳಿಂದಲೂ ಅವರಿಂದು ಅಪಾರ ಅಭಿಮಾನಿಬಳಗವನ್ನು ಪಡೆದಿದ್ದಾರೆ. ನನ್ನ ದೃಷ್ಟಿಯಲ್ಲಿ ಮೇಳದ ಯಜಮಾನರಿಗೆ ಆತ್ಮೀಯರಾಗಿ ಭಕ್ತಿ, ಶ್ರದ್ಧೆಯಿಂದ ಒಬ್ಬ ಹೊಂದಾಣಿಕೆಯಲ್ಲಿ ಕೆಲಸ ಮಾಡುವ ನಿಷ್ಠಾವಂತ ಹಾಗೂ ಬುದ್ಧಿವಂತ ವೃತ್ತಿ ಕಲಾವಿದ ತೀರ್ಥಹಳ್ಳಿ ಗೋಪಾಲಾಚಾರ್ಯ.

**ಕಂದಾವರ ರಘುರಾಮಶೆಟ್ಟಿಯವರು ಕಂಡಂತೆ:**ನಿವೃತ್ತ ಅಧ್ಯಾಪಕರಾಗಿ ಒಟ್ಟು 33 ಪ್ರಸಂಗಗಳನ್ನು ಯಕ್ಷರಂಗಕ್ಕೆ ನೀಡಿದ ಶೆಟ್ಟರದು ಬಹುಮುಖ ಪ್ರತಿಭೆ. ಹವ್ಯಾಸಿ ಭಾಗವತರು, ವೇಷಧಾರಿ, ಉತ್ತಮ ಅರ್ಥಧಾರಿ, ನಾಟಕಕಾರ, ಗಮಕಿ, ವ್ಯಾಖ್ಯಾನಕಾರರೂ ಹೌದು. ಗೋಪಾಲರ ಕಲಾವಂತಿಕೆಯ ಬಗ್ಗೆ ಮಾತನಾಡುತ್ತಾ, "ಒಮ್ಮೆ ಪಾತ್ರ ಹಂಚಿಕೆ ಮಾಡುವಾಗ ಕಾಳಿಂಗನಾವಡರು, ಈ ಹುಡುಗನಿಗೆ ಯಾವ ಪಾತ್ರ ಕೊಡೋಣ ರಘುಮಾಸ್ಟರೇ? ಎಂದು ಕೇಳಿದರು. ಬ್ರಾಹ್ಮಣ ವಟುವಿನ ಪಾತ್ರ ಕೊಡುವುದೆಂದು ತೀರ್ಮಾನವಾಯ್ತು. ಗಂಡಾಗಿ ಮತ್ತು ಹೆಣ್ಣಾಗಿ ಅಭಿನಯಿಸುವ ಸೋಮವಂತನ ಪಾತ್ರವದು. ಎರಡು ಮೂರು ರೀತಿಯಲ್ಲಿ ಅಭಿನಯ ಮಾಡಬೇಕಾಗಿರುವ ಕಷ್ಟದ ಆ ಪಾತ್ರವನ್ನು ಗೋಪಾಲರು ಬಹಳ ಚೆನ್ನಾಗಿ ನಿರ್ವಹಿಸಿದರು. ಆಮೇಲೆ ಹಳೆಯ ಪ್ರಸಂಗದ ಮತ್ತೊಂದು ಪಾತ್ರಕ್ಕೆ ಅವಕಾಶ ಕೊಟ್ಟೆವು. ಅದು ವ್ರಣಹಿಡಿದ ಹೆಂಗಸಿನ ಪಾತ್ರ. ಅದೂ ಬಹಳಕಷ್ಟದ ಪಾತ್ರ. ಅದನ್ನೂ ಅವರು ಚೆನ್ನಾಗಿಯೇ ನಿರ್ವಹಿಸಿದರು. ಎರಡರಲ್ಲಿಯೂ ಗೋಪಾಲರ ಅಭಿನಯ ನೋಡಿದ ನನಗೆ ಅವರ ಮೇಲೆ ತುಂಬ ಭರವಸೆ ಬಂತು. ಭವಿಷ್ಯದಲ್ಲಿ ಅವರೊಬ್ಬರು ಉತ್ತಮ ಕಲಾವಿದರಾಗುತ್ತಾರೆಂದು ಹೇಳಿದನನ್ನ ಮಾತು ಸತ್ಯವಾಯ್ತು. ಮುಂದೆ ನನ್ನ ಏಳೆಂಟು ಪ್ರಸಂಗಗಳಲ್ಲಿ ಅವರು

ಅಭಿನಯಿಸಿದರು. 'ಶ್ರೀದೇವಿಬನಶಂಕರಿ' ಪ್ರಸಂಗದಲ್ಲಿ ಯಾಜಿಯವರ ಜೋಡಿಯ ಒಂದು ಪುಂಡುವೇಷ ಮಾಡಿದರು. ವೀರಾವೇಶದಸು ಕೇತುವಿನ ಪಾತ್ರವದು. ಅವರು ನಿರ್ವಹಿಸಿದ್ದು ಹೇಗೆ? ಹೇಳಬೇಕೆಂದರೆ ಭರ್ಜರಿ, ಎರಡು ಮಾತಿಲ್ಲ. 'ಚೆಲುವೆಚಿತ್ರಾವತಿ' ಪ್ರಸಂಗದಲ್ಲಿ ಚಿತ್ರಾವತಿಯ ಮಗ ಚಿತ್ರಾಶ್ವನಾಗಿ ಗೋಪಾಲರ ಪಾತ್ರ ನನಗೆ ಬಹಳ ಹಿಡಿಸಿತು. ಗೋಪಾಲರು ಬಡಗುತಿಟ್ಟಿನ ಒಬ್ಬ ಪರಿಪೂರ್ಣ ಕಲಾವಿದರೆಂಬುದನ್ನು ನಾನು ಮನಬಿಚ್ಚಿ ಹೇಳಬಲ್ಲೆ." ಎನ್ನುತ್ತಾ ಮುಂದುವರಿದು ಶೆಟ್ಟರು, "ಆಚಾರ್ಯರು ನಾನು ಮೆಚ್ಚಿದ ಒಬ್ಬ ಒಳ್ಳೆಯ ನೃತ್ಯಗಾರ, ಅವರ ಹೆಜ್ಜೆಗಾರಿಕೆ ನನಗೆ ತುಂಬ ಇಷ್ಟ. ಅವರ ಸ್ವರಭಾರಶ್ರುತಿ ಸ್ವಲ್ಪ ಎಲ್ಲಾ ಪಾತ್ರಕ್ಕೆ ಸಾಕಾಗುವುದಿಲ್ಲ. ತಾರಕ–ಅನುತಾರಕ ಬಿಟ್ಟರೆ, ಮಂದ್ರ, ಮಧ್ಯಮಸ್ಥಾಯಿಯಲ್ಲಿ ಖಂಡಿತಾ ಅವರು ಮೇಲಿದ್ದಾರೆ. ಕೇದಗೆ ಮುಂದಲೆಗೆ ಅವರು ಹೆಸರುವಾಸಿ. ವೀರರಸ ಹಾಗೂ ಕರುಣರಸ ಪ್ರಧಾನಪಾತ್ರಗಳಲ್ಲಿ ಅವರದು ಎತ್ತಿದಕೈ. ವೀರಮತ್ತು ದುಃಖಭಾವವನ್ನು ಚೆನ್ನಾಗಿರಂಗದಲ್ಲಿ ಅಭಿವ್ಯಕ್ತಿಸುತ್ತಾರೆ. 'ರತಿರೇಖ'ದಲ್ಲಿಯ ಅವರ ಮಂತ್ರಿಯ ಪಾತ್ರನನ್ನ ಮನಸ್ಸಿನಲ್ಲಿ ಶಾಶ್ವತ ನಿಲ್ಲುವಂಥದ್ದು. ಇನ್ನು ಅವರ ಅಭಿಮನ್ಯು ಪಾತ್ರದ ಬಗ್ಗೆ ಹೇಳುವುದಾದರೆ, ನಾನು ನೋಡಿದ ಪೈಕಿ ಪಾಂಡೇಶ್ವರ ವೆಂಕಟರಾಯರ ಅಭಿಮನ್ಯುವನ್ನು ಮೊದಲು ನಾನು ಮೆಚ್ಚಿಕೊಂಡದ್ದು. ಇತ್ತೀಚಿನ ತಲೆಮಾರಿನಲ್ಲಿ ಗೋಪಾಲರ ಅಭಿಮನ್ಯುವೇ ಹೆಚ್ಚು ಜನಪ್ರಿಯವಾದದ್ದು." ಎಂದಿದ್ದಾರೆ.

**ವಿದೇಶಯಾನ :** ಕಲಾವಿದಗೋಪಾಲಾಚರ್ಯರನ್ನು ವಿದೇಶೀ ನೆಲಕ್ಕೆ ಮೊದಲು ಪಾದಾರ್ಪಣೆ ಮಾಡಿಸಿದ್ದು ಭಾಗವತರಾದ ಸುಬ್ರಹ್ಮಣ್ಯಧಾರೇಶ್ವರರು. ಮಸ್ಕತ್‌ನ ಭಾರತೀಯ ಸಾಂಸ್ಕೃತಿಕ ಸಂಸ್ಥೆಯಾದ ರಂಗಭೂಮಿ ತಂಡವು 1991ರಲ್ಲಿಗಾಂಧೀಜಿಯವರ 122ನೇಜನ್ಮದಿನೋತ್ಸವದ ಅಂಗವಾಗಿ ನಡೆಸಿದ ಬಭ್ರುವಾಹನ, ಲಂಕಾದಹನ, ಮತ್ತು ನರಕಾಸುರವಧೆ ಎಂಬ ಮೂರು ಯಕ್ಷಗಾನಪ್ರದರ್ಶನಗಳಲ್ಲಿ ಗೋಪಾಲರು ಪಾಲ್ಗೊಂಡು, ಶ್ರೇಷ್ಠ ಪ್ರದರ್ಶನ ನೀಡಿದರು. ಭಾರತದ ರಾಯಭಾರಿ ರಂಜಿತ್ಗುಪ್ತಾಮಸ್ಕತ್ರಂಗಭೂಮಿ ಪರವಾಗಿ ಗೋಪಾಲರನ್ನು ಸನ್ಮಾನಿಸಿದರು. 2017ರಲ್ಲಿ ತೀರ್ಥಹಳ್ಳಿ ಗೋಪಾಲರು ಮತ್ತೊಂದು ತಂಡದೊಂದಿಗೆ ಬೆಹರಿನ್ಮತ್ತು ಕುವೈತ್‌ಗೆ ತೆರಳಿ ಅಲ್ಲಿಯ ಕನ್ನಡ ಬಂಧುಗಳಿಗೆ, ಅಭಿಮಾನಿಗಳಿಗೆ ತಮ್ಮ ಯಕ್ಷಪ್ರತಿಭೆಯನ್ನು ಪರಿಚಯಿಸಿ, ರಸದೌತಣ ನೀಡಿದ್ದಾರೆ.

ಹದಿನಾಲ್ಕನೇ ವಯಸ್ಸಿನಲ್ಲಿ ಬಣ್ಣದ ಬದುಕಿಗೆ ಶ್ರೀಕಾರ ಹಾಕಿದ ಗೋಪಾಲರು ಕಲಾಸೇವೆಯ ಆರಂಭದಲ್ಲಿ ಹೆದರಿಕೆಯಿಂದಲೇ ರಂಗಪ್ರವೇಶ ಮಾಡಿದವರು. ಬರಬರುತ್ತರಂಗದಲ್ಲಿಯೇ ಹಂತಹಂತವಾಗಿ ಕಲಿತು ಮೇಲೇರುತ್ತ ರಂಗಸ್ಥಳದರಾಜನಂತೆ ಬೆಳೆದರು. ರಂಗದ ಚಲನೆ ನಿಲುವಿನಲ್ಲಿ ಸ್ವಂತಿಕೆಯ ಛಾಪು, ಹೆಚ್ಚೂ ಅಲ್ಲದ, ಕಡಿಮೆಯೂ ಅಲ್ಲದ ಸಮತೂಕದ ಸುಸ್ಪಷ್ಟದ ಮಾತು, ಔಚಿತ್ಯಕ್ಕೆ ತಕ್ಕ ಅಭಿನಯ, ಅಧಿಕವಲ್ಲದ ಕುಣಿತ, ಅಪಾರ ಪ್ರತ್ಯುತ್ಪನ್ನಮತಿತ್ವ, ಶ್ರುತಿಬದ್ಧತೆ, ಶಿಸ್ತು ಬದ್ಧತೆಯಿಂದ ಅಭಿವ್ಯಕ್ತಿ ಪರಿಣಾಮಕಾರಿಯಾಗುವಂತೆ ನೋಡಿಕೊಳ್ಳುವ ಜಾಗರೂಕತೆಯನ್ನು ಇವರ ವೇಷಗಾರಿಕೆಯಲ್ಲಿ ಖಚಿತವಾಗಿ ಗಮನಿಸಬಹುದು. ನಿರಹಂಕಾರಿ, ಸಹೃದಯ, ಸಶ್ರದ್ಧೆಯ, ನಿಷ್ಕಳಂಕ ವ್ಯಕ್ತಿತ್ವವುಳ್ಳ ಕಲಾವಿದರಾಗಿ, ದೇಶ ವಿದೇಶಗಳಲ್ಲಿ, ಅನೇಕ ಮಹಾನಗರಗಳಲ್ಲಿ, ನೂರಾರು ಪಾತ್ರಗಳನ್ನು ನಿರ್ವಹಿಸಿದವರು. ಆಳಂಗದಲ್ಲಿ ಸ್ವಲ್ಪ ಇನ್ನೂ ಎತ್ತರವಾಗಿದ್ದಿದ್ದರೆಯಕ್ಷ ಲೋಕದ ಯಾವುದೇ ಒಬ್ಬ ಅಗ್ರಶ್ರೇಣಿಯ ಕಲಾವಿದರ ಸಾಲಿಗೆ ಸೇರಿಸಬಹುದಾದ ಕಲಾವಿದ ತೀರ್ಥಹಳ್ಳಿ ಗೋಪಾಲಾಚಾರ್ಯ. ಆಚಾರ್ಯರಿಗೆ ಅಭಿಮಾನಿಗಳ ಮಹಾಪೂರವೇ ಇದೆ. ಅನೇಕ ಸಂಘಸಂಸ್ಥೆಗಳು, ಮಠಮಂದಿರಗಳು ಪ್ರಶಸ್ತಿ ನೀಡಿ ಅವರನ್ನು ಗೌರವಿಸಿವೆ.

**ಯುವಕರು ಮತ್ತು ಯಕ್ಷಕಲೆಯ ಕುರಿತು ಆಚಾರ್ಯರು :** ಸಮಷ್ಟಿ ಕಲೆಯಾದ ಯಕ್ಷಗಾನದಲ್ಲಿ ಯುವಕರು ತಮ್ಮನ್ನು ತೊಡಗಿಸಿಕೊಳ್ಳಬೇಕು. ಉನ್ನತ ಶುಚಿಶೀಲಕಲಾವಿದರಾಗಿ ಮೆರೆಯಲು ಪ್ರಯತ್ನಿಸಬೇಕು. ಕೆಟ್ಟಚಟಗಳಿಲ್ಲದೇ ಹೋದರೆ ಈ ಕ್ಷೇತ್ರದಲ್ಲಿ ಜೀವನವನ್ನು ಆರಾಮವಾಗಿ ನಿಭಾಯಿಸಬಹುದು. ಯುವಕರು ಹಾಗೂ ಮಕ್ಕಳು ಯಕ್ಷಗಾನವನ್ನು ವೃತ್ತಿಯಾಗಿಸಿಕೊಳ್ಳಲು ಸಾಧ್ಯವಾಗದೆ ಹೋದರೆ ಪ್ರವೃತ್ತಿಯಲ್ಲಾದರೂ ಇದರ ಹವ್ಯಾಸ ಬೆಳೆಸಿಕೊಂಡರೆ ಈ ಕಲೆಯ ಬೆಳವಣಿಗೆ ಸಾಧ್ಯ. ಇಂದು ಯಕ್ಷಗಾನರಂಗದಲ್ಲಿ ಮಕ್ಕಳು ಹಾಗೂ ಯುವಕರಿಗೆ ಆಸಕ್ತಿ ಕಡಿಮೆಯಾಗಿಲ್ಲ. ಒಂದರ್ಥದಲ್ಲಿ

**International Journal of Research in Social Sciences**
Vol. 7Issue 1, January 2017,
ISSN: 2249-2496 Impact Factor: 7.081
Journal Homepage: http://www.ijmra.us, Email: editorijmie@gmail.com Double-Blind Peer Reviewed Refereed Open Access International Journal - Included in the International Serial Directories Indexed & Listed at: Ulrich's Periodicals Directory ©, U.S.A., Open J-Gate as well as in Cabell's Directories of Publishing Opportunities, U.S.A

ಅದನ್ನು ಪ್ರೋತ್ಸಾಹಿಸಿ ಬೆಳೆಸುತ್ತಿರುವುದೇ ಮಕ್ಕಳು ಯುವಕರೆನ್ನಬಹುದು. ಆದರೆ ಅವರು ಕಾಲಮಿತಿಯ ಯಕ್ಷಗಾನವನ್ನು ಹೆಚ್ಚಾಗಿ ಬಯಸುತ್ತಿದ್ದಾರೆ. ಯಾರೇ ಆಗಲಿ ಪರಿಪೂರ್ಣ ಕಲಾವಿದರಾಗಿ ಬೆಳೆಯಬೇಕಾದರೆ, ಮೊದಲು ಪೂರ್ವರಂಗದಲ್ಲಿ ಸಾಕಷ್ಟು ಪಳಗಬೇಕು. ಹಂತಹಂತವಾಗಿ ಮೇಲೇರಿದಾಗಲೇ ಪೂರ್ಣತ್ವ ಹೊಂದಲು ಸಾಧ್ಯ. ಯಕ್ಷಗಾನ ಕಲೆ ಇಂದು ಕೇವಲ ಜಾನಪದರಂಗಕಲೆ ಮಾತ್ರವಾಗಿ ಉಳಿಯದೆ ಅಥವಾ ಕೇವಲ ಆರಾಧನೆಯ ಕಲೆಯಾಗಿ ಉಳಿಯದೆ, ಆ ಚೌಕಟ್ಟನ್ನು ಮೀರಿ ಸಮಕಾಲೀನ ಸಂಗತಿಗಳಿಗೆ ಸ್ಪಂದಿಸುತ್ತ ಒಂದು ಅಭಿಜಾತಕಲೆಯಾಗಿ ಮೆರೆದಿದೆ. ಇಲ್ಲಿಯ ಪ್ರತಿಭಾವಂತ ಕಲಾವಿದರು ಸಂಪ್ರದಾಯದೊಂದಿಗೆ ಸಮಕಾಲೀನಸಂಗತಿಗಳನ್ನು ಸೇರಿಸಿಕೊಳ್ಳುತ್ತಾ ಈ ಕಲೆಯನ್ನು ನಿಂತನೀರಾಗದಂತೆ ಮಾಡುತ್ತಿರುವುದು ಸಂತಸದ ಸಂಗತಿ. ಈ ನಿಟ್ಟಿನಲ್ಲಿ ಕರಾವಳಿಯ ಯಕ್ಷಾಭಿಮಾನಿಗಳು, ಪೋಷಕರು, ದಾನಿಗಳು, ಭಗವದ್ಭಕ್ತರು ಕಲಾವಿದರ ನಿರಂತರ ಪ್ರೋತ್ಸಾಹದ ಅಗತ್ಯವಿದೆ ಎನ್ನುತ್ತಾರೆ.

**ಗ್ರಂಥ ಋಣ:**

1.ಯಕ್ಷಮುಡಿ – (ಸಂ) ಡಾ.ರಾಜಶ್ರೀ, ಶಿಶಿರ್ಎಂ.ಕೆ, ಯಕ್ಷಗಾನ ಅಧ್ಯಯನಕೇಂದ್ರ, ಮಂಗಳೂರುವಿಶ್ವವಿದ್ಯಾನಿಲಯ, 2012

2.ಯಕ್ಷಸಿರಿ – (ಸಂ) ಡಾ.ರಾಜಶ್ರೀ, ಸತೀಶ್ಕೊಣಾಜೆ, ಯಕ್ಷಗಾನ ಅಧ್ಯಯನಕೇಂದ್ರ, ಮಂಗಳೂರುವಿಶ್ವವಿದ್ಯಾನಿಲಯ, 2012

3.ಉಡುಪಿ ಯಕ್ಷಪರಂಪರೆ – ದುಗ್ಗಪ್ಪಯು.ಮಲ್ಪೆ, ಯಕ್ಷಜ್ಯೋತಿ (ರಿ.) ಮಲ್ಪೆ, 2013.

4.ಯಕ್ಷಗಾನರಂಗ ವೈಭವ – ಮನೋಹರ ಎಸ್.ಕುಂದರ್, ಬಡಾಎರ್ಮಾಳು, ಶೀನಮೀನಪ್ರಕಾಶನ, ಬಡಾಎರ್ಮಾಳು, ಉಡುಪಿ, 2013

5.ಯಕ್ಷಕೇದಗೆ – (ಸಂ) ಡಾ.ರಾಜಶ್ರೀ, ಸತೀಶ್ಕೊಣಾಜೆ, ಯಕ್ಷಗಾನ ಅಧ್ಯಯನಕೇಂದ್ರ, ಮಂಗಳೂರುವಿಶ್ವವಿದ್ಯಾನಿಲಯ, 2013

6.ಯಕ್ಷತರು – (ಸಂ) ಪ್ರೊ. ಅಮೃತಸೋಮೇಶ್ವರ, ಯಕ್ಷಗಾನ ಅಧ್ಯಯನಕೇಂದ್ರ, ಮಂಗಳೂರುವಿಶ್ವವಿದ್ಯಾನಿಲಯ, 2013.